
ಫೆಬ್ರವರಿ 2024 ಸಂಪುಟ 6 ಸಂಚಿಕೆ 2 ಸೆಲ್ಕೋ ಮಾಸಪತ್ರಿಕೆ

SELCO

# Sunಚಲನ

## ಬಜೆಟ್‌ನಲ್ಲಿ ಸೂರ್ಯಕಿರಣ






ರಾಯಚೂರು ವಿಶ್ವವಿದ್ಯಾಲಯದ ಎಂ. ಎಸ್. ಡಬ್ಲ್ಯು ವಿಭಾಗದ ವಿದ್ಯಾರ್ಥಿಗಳು ರಾಯಚೂರಿನ ಸೆಲ್ಕೋ ಫೌಂಡೇಶನ್ ನ ಶಾಖಾ ಕಚೇರಿಗೆ ಇತ್ತೀಚೆಗೆ ಭೇಟಿ ನೀಡಿ, ರಾಯಚೂರು ಜಿಲ್ಲೆಯಲ್ಲಿ 257 ಆರೋಗ್ಯ ಕೇಂದ್ರಗಳಿಗೆ ಅಳವಡಿಸಲಾದ ಸೌರಶಕ್ತಿಚಾಲಿತ ಘಟಕಗಳ ಕಾರ್ಯನಿರ್ವಹಣೆಯ ಕುರಿತ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ, ಸೆಲ್ಕೋ ಸಂಸ್ಥೆಯ ಕ್ಷೇತ್ರ ವ್ಯವಸ್ಥಾಪಕ ಯಲ್ಲಾಲಿಂಗ, ಉಪನ್ಯಾಸಕ ಸಂತೋಷ್ ಹಾಗೂ ಸಿಬಂದಿ ಭಾಗಿಯಾಗಿದ್ದರು.

---

ಶಿರಸಿಯ ಪ್ರಶಾಂತಿ ಫೌಂಡೇಶನ್‌ನ ಚೇತನಾ ವಿಶೇಷ ಚೇತನ ಮಕ್ಕಳ ಪುನರ್ವಸತಿ ಹಾಗೂ ಔದ್ಯೋಗಿಕ ಕೇಂದ್ರದಲ್ಲಿ, ಸೆಲ್ಕೋ ಫೌಂಡೇಶನ್ ಹಾಗೂ ಸೋನಿ ಕಂಪನಿಗಳು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿ ಅಡಿಯಲ್ಲಿ, ಸಿರಸಿಯ ಸೆಲ್ಕೋ ಸೋಲಾರ್ ಶಾಖೆ ಅಳವಡಿಸಿರುವ ಸೋಲಾರ್ ಸಿಸ್ಟಮ್‌ನ ಉದ್ಘಾಟನೆ ಹಸ್ತಾಂತರ ಕಾರ್ಯಕ್ರಮವನ್ನು ಸೆಲ್ಕೋ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮೋಹನ ಭಾಸ್ಕರ ಹೆಗಡೆಯವರು ನೆರವೇರಿಸಿದರು.

ಸೆಲ್ಕೋ ಫೌಂಡೇಶನ್ ನ ಅಧಿಕಾರಿ ನವೀನ, ಪ್ರಶಾಂತಿ ಫೌಂಡೇಶನ್ ನ ಎಲ್ಲ ಟ್ರಸ್ಟಿಗಳು, ಡಾ. ಮಲರ್ ಗಿರಿಧರ್, ಡಾ. ಗಿರಿಧರ್ ಹಾಗೂ ವಿಶೇಷ ಚೇತನ ಮಕ್ಕಳು ಹಾಗೂ ಸಮಾಜದ ಗಣ್ಯರು ಉಪಸ್ಥಿತರಿದ್ದರು.



---

ಮುಂಬೈನಲ್ಲಿ ಇತ್ತೀಚೆಗೆ ಅಪ್ರಾವ ಎನರ್ಜಿ ಕಂಪನಿಯ ಸಾಮಾಜಿಕ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ, ಸೆಲ್ಕೋ ಇಂಡಿಯಾದ ಉಪ ಮಹಾಪ್ರಬಂಧಕ ಸುದೀಪ್ತ ಘೋಷ್ ಅವರು ಸೆಲ್ಕೋದ ಯೋಜನೆಗಳ ಕುರಿತು ಪ್ರಸ್ತುತಪಡಿಸಿದರು.




ಜೀವಿಕಾ ಸಂಸ್ಥೆಯ ಸಹಯೋಗದಲ್ಲಿ, ಬಿಹಾರದಲ್ಲಿ ನಡೆದ ರಾಜ್ಯಮಟ್ಟದ ಓರಿಯಂಟೇಷನ್ ಕಾರ್ಯಕ್ರಮದಲ್ಲಿ ಬಿಹಾರ ರಾಜ್ಯದ ಎರಡು ಜಿಲ್ಲೆಗಳ ವಿವಿಧ ಸ್ಥರಗಳ ವ್ಯವಸ್ಥಾಪಕರು, ಕಾರ್ಯಕ್ರಮಗಳ ರಾಜ್ಯ ವ್ಯವಸ್ಥಾಪಕರು ಮತ್ತು ಜೀವಿಕಾಮ ಸಂಸ್ಥೆಯ ಸುಮಾರು 45 ಸಿಬಂದಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸೆಲ್ಕೋ ಇಂಡಿಯಾದ ಸಿಎಸ್‌ಆರ್ ವಿಭಾಗದ ಮುಖ್ಯ ವ್ಯವಸ್ಥಾಪಕ ಅಮೋಘ ಮಮದಾಪೂರ್, ಕ್ಷೇತ್ರ ವ್ಯವಸ್ಥಾಪಕ ವಿನಾಯಕ ಹೆಗಡೆ ಹಾಜರಿದ್ದರು.



---

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ದತ್ತು ಪಡೆದ ಗ್ರಾಮಗಳ ಮಹಿಳೆಯರಿಗೆ ಮಹಿಳಾ ಸಬಲೀಕರಣ ಅವಕಾಶ ಮತ್ತು ಸಾಧ್ಯತೆ ಅರಿವು ಕಾರ್ಯಕ್ರಮವನ್ನು ಜಿಲ್ಲೆಯ ತಿಕೋಟಾ ತಾಲ್ಲೂಕು ತೊರವಿ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು.




ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಕುಲಸಚಿವ ಶಂಕರಗೌಡ ಸೋಮನಾಳ, ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಮುಖ್ಯಸ್ಥರು ಮತ್ತು ನಿರ್ದೇಶಕರಾದ ಪ್ರೊ. ಲಕ್ಷ್ಮೀದೇವಿ ವೈ., ಜಿಲ್ಲಾ ಸಂಪನ್ಮೂಲ ವ್ಯಕ್ತಿ ಸುಧೀರ ಕುಲಕರ್ಣಿ, ತೊರವಿ ಗ್ರಾಮ ಪಂಚಾಯಿತ ಅಭಿವೃದ್ಧಿ ಅಧಿಕಾರಿ, ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ ಆನಂದ ಪಡನಾಡ, ಶಿವಕುಮಾರ್ ಮತ್ತು ಪ್ರಸನ್ನ ಗುಮಾಸ್ತೆ ಉಪಸ್ಥಿತರಿದ್ದರು.

---

ಅರಣ್ಯ, ಪರಿಸರ ವಿಜ್ಞಾನ ಸಚಿವ ಈಶ್ವರ ಖಂಡ್ರೆಯವರು, ಸೆಲ್ಕೋ ಸಂಸ್ಥೆಯು ಬೀದರ್ ಜಿಲ್ಲೆ, ಬಸವಕಲ್ಯಾಣ ತಾಲೂಕಿನ ಮಂತಲ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಲಾಗಿರುವ ಸೌರಶಕ್ತಿಚಾಲಿತ ಇನ್ವರ್ಟ್ ವ್ಯವಸ್ಥೆಯನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಜ್ಞಾನೇಶ್ವರ್, ಗ್ರಾಮ ಪಂಚಾಯತ್ ಅಧ್ಯಕ್ಷೆ ಚಂದ್ರಕಲಾ ಹಾಜರಿದ್ದರು.



# Sunಚಲನ

ಫೆಬ್ರವರಿ 2024 ಸಂಪುಟ 6 ಸಂಚಿಕೆ 2

ಸೆಲ್ಕೋ ಆಂತರಿಕ ಮಾಸಪತ್ರಿಕೆ



**ಸೆಲ್ಕೋ ಸಂಸ್ಥಾಪಕರು**
ಡಾ. ಹರೀಶ ಹಂದೆ

**ಮಾರ್ಗದರ್ಶಕರು**
ಮೋಹನ ಭಾಸ್ಕರ ಹೆಗಡೆ

**ಸಂಪಾದಕ ಮಂಡಳಿ**
ಗುರುಪ್ರಕಾಶ್ ಶೆಟ್ಟಿ
ಕರಿಸ್ವಾಮಿ ಕೆ.
ಮಂಜುನಾಥ ಭಾಗವತ್
ವೇಣುಗೋಪಾಲ್

**ಸಮಗ್ರ ನಿರ್ವಹಣೆ**
ಜಗದೀಶ ಪೈ ಎ.

**ವಿನ್ಯಾಸ**
Madhubani



- ಯೋಚನೆ ಧನಾತ್ಮಕವಾಗಿದ್ದರೆ ಪರಿಣಾಮವೂ!........................**ಡಾ. ಹರೀಶ ಹಂದೆ** 4
- ಉಳಿತಾಯ ಖಾತೆ ಚಾಲ್ತಿಯಲ್ಲಿರಬೇಕು!................**ಸೆಲ್ಕೋ ಸಂಪಾದಕೀಯ ಮಂಡಳಿ** 5
- ಜ್ಞಾನ ಏಕೆ? ಬೇಕೆ? ಸಾಕೆ? ..................... .....................**ಮೋಹನ ಭಾಸ್ಕರ ಹೆಗಡೆ** 6
- ರವಿಯ ಬೆಳಕಿನಲ್ಲಿ ಸವಿಯ ವಿಚಾರ ..............................................**ಕರಿಸ್ವಾಮಿ ಕೆ.** 8
- ಸಾಮಾಜಿಕ ಸ್ಟಾಕ್ ಎಕ್ಸ್‌ಛೇಂಜ್ ಎಂಬ ಹೊಸ ಪರಿಕಲ್ಪನೆ ..............**ಪ್ರದ್ಯುಮ್ನ ಯು. ಕೆ.** 10
- ಕೇಂದ್ರ ಸರ್ಕಾರದ ಸೂರ್ಯಘರ್ ಯೋಜನೆ ..............................................11
- ಸಕ್ಕರೆಯ ನಾಡಿನಲ್ಲಿ ಸೌರಶಕ್ತಿಯ ರಾಯಭಾರಿ..........................................12
- ಮನೆಯಲ್ಲಿ ಉದ್ಯಮ ಮನದಲ್ಲಿ ಸಂಭ್ರಮ.................................................13
- ಕರ್ನಾಟಕದಲ್ಲಿ ಬರಗಾಲ......................................................................14
- ಗ್ರಾಹಕ ಅಭಿಮತ....................................................................... 15
- ಬಿಹಾರದಲ್ಲಿ ಸೆಲ್ಕೊದ ಹೊಸ ಒಡಂಬಡಿಕೆ .......................ವಿನಾಯಕ ಜಕ್ಕೊಳ್ಳಿ. 16
- ಹರನತ್ತ ಬಾಗಿದ ಭಾಸ್ಕರ .....................................................................17
- ಡಿಯರ್ ದುಬೈ ಹೇಗೆ ಹೇಳಲಿ ಬೈ ಬೈ ......................................**ಜಗದೀಶ ಪೈ** 18


## ಭರತವಾಕ್ಯ

"ಸೂರ್ಯನ ಬೆಳಕಿನಷ್ಟು ದೊಡ್ಡ ಶಕ್ತಿಮೂಲ ಯಾವುದಿದೆ! ಅದನ್ನು ಯಾರೂ ಸ್ವಾಧೀನ ಪಡಿಸಲಾರರು ಮತ್ತು ಯಾರೂ ಅದಕ್ಕೆ ತೆರಿಗೆ ವಿಧಿಸಲಾರರು !"



– ಬೋನಿ ರಾಯಿಟ್ಟ್
ಅಮೆರಿಕದ ಹಾಡುಗಾರ್ತಿ


ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್
ನಂ.1361, 9ನೇ ಅಡ್ಡರಸ್ತೆ,
ಜೆ.ಪಿ. ನಗರ, 1ನೇ ಹಂತ, ಬೆಂಗಳೂರು-560078
website: *www.selco-india.com*
Tollfree: 1800 419 0780
ಸೆಲ್ಕೋ ಶಾಖೆಗಳು: ಕರ್ನಾಟಕ (37), ಬಿಹಾರ (4), ಕೇರಳ (1), ತಮಿಳುನಾಡು (2), ಆಂಧ್ರಪ್ರದೇಶ (2), ಮಹಾರಾಷ್ಟ್ರ(4)

ಸೆಲ್ಕೋ ಫೇಸ್‌ಬುಕ್
ಸೆಲ್ಕೋ ಟ್ವೀಟರ್
ಸೆಲ್ಕೋ ಯೂಟ್ಯೂಬ್
ಸೆಲ್ಕೋ ಇನ್‌ಸ್ಟಾಗ್ರಾಮ್
ಸೆಲ್ಕೋ ವೆಬ್‌ಸೈಟ್

ಋಣಾತ್ಮಕ ಮಾತುಗಳಿಂದ ಯಾವುದೇ ಪ್ರಯೋಜನವಿರುವುದಿಲ್ಲ, ಬದಲಾಗಿ ಅದು ವಾತಾವರಣದಲ್ಲಿ ಋಣಾತ್ಮಕತೆಯನ್ನೂ, ಸುತ್ತಲಿನ ಜನರಲ್ಲಿನಿರುತ್ಸಾಹವನ್ನೂ ತುಂಬುತ್ತದೆ ಅಷ್ಟೆ!




ಕ್ಷಿತಿಜ

**ಡಾ. ಹರೀಶ ಹಂದೆ**

ಸೆಲ್ಕೋ ಸಂಸ್ಥಾಪಕರು

# ಯೋಚನೆ ಧನಾತ್ಮಕವಾಗಿದ್ದರೆ ಪರಿಣಾಮವೂ!



ಸಾಮಾನ್ಯವಾಗಿ ಯಾವುದೇ ಒಂದು ವಸ್ತು ಅಥವಾ ವಿಚಾರಕ್ಕೆ ಹಲವು ಆಯಾಮಗಳಿರುತ್ತವೆ. ಒಬ್ಬ ಮನುಷ್ಯನಿಗೆ ಇರುವ ಸಾಮರ್ಥ್ಯ ಮತ್ತು ಸೌಕರ್ಯವನ್ನು ಅವಲಂಬಿಸಿಕೊಂಡು ಆ ವ್ಯಕ್ತಿಯು ನಿರ್ದಿಷ್ಟ ವಸ್ತು ಅಥವಾ ವಿಚಾರದ ಕೆಲವು ಆಯಾಮಗಳನ್ನಷ್ಟೇ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಅಂದರೆ ನಾವು ಅರ್ಥಮಾಡಿಕೊಳ್ಳಲು ಅಥವಾ ಗ್ರಹಿಸಲು ಸಾಧ್ಯವೇ ಇಲ್ಲದ ಅನೇಕ ಆಯಾಮಗಳು ಈ ಜಗತ್ತಿನಲ್ಲಿ ಇವೆ ಎಂದಾಯಿತು. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸಭೆ ಸಮಾರಂಭಗಳಲ್ಲಿ ಅಥವಾ ಯಾವುದಾದರೂ ಮಾತುಕತೆಗಳಲ್ಲಿ ಕೆಲವರು ಸಮಸ್ಯೆಗಳನ್ನಷ್ಟೇ ಹೇಳುತ್ತಿರುತ್ತಾರೆ. ‘ರಸ್ತೆ ಸರಿಯಿರಲಿಲ್ಲ’, ‘ಇದು ಸರಿಯಾಗುವ ಹಾಗೆ ಕಾಣುವುದೇ ಇಲ್ಲ, ಬಸ್ಸಿನ ಸಂಖ್ಯೆ ಸಾಲದು, ಭಾರೀ ರಶ್ಶು, ಈ ವ್ಯವಸ್ಥೆ ಉದ್ಧಾರವಾಗುವ ಲಕ್ಷಣವೇ ಇಲ್ಲ... ರಾಜಕೀಯ ಕ್ಷೇತ್ರ ಕುಸಿದು ಹೋಗಿದೆ, ಕಾಲ ಕೆಟ್ಟಿದೆ’ ಎಂಬೆಲ್ಲ ಮಾತುಗಳನ್ನು ಸಹಜವಾಗಿ ಕೇಳುತ್ತಲೇ ಇರುತ್ತೇವೆ. ಇನ್ನು ಕೆಲವು ಇರುತ್ತಾರೆ, ಅವರು ಇರುವ ಚೌಕಟ್ಟಿನಲ್ಲಿಯೇ ಸಮಸ್ಯೆಗಳನ್ನು ಗುರುತಿಸಿದರೆ ಅವುಗಳಿಗೆ ಏನು ಪರಿಹಾರ ಕಂಡು ಹಿಡಿಯಬಹುದು ಎಂದು ಆಲೋಚಿಸುತ್ತಿರುತ್ತಾರೆ. ಅವರ ಆಲೋಚನೆಗಳು ಚಿಕಿತ್ಸಕವಾಗಿರುತ್ತವೆ. ಅಂದರೆ ಗಾಯವು ಗುಣವಾಗಲು ಮುಲಾಮು ಅಥವಾ ಔಷಧಿ ಹೇಗೆ ಸಹಾಯ ಮಾಡುತ್ತದೋ,ಹಾಗೆಯೇ ಸಾಮಾಜಿಕ ವ್ಯವಸ್ಥೆಯಲ್ಲಿರುವ ಹುಳುಕು, ಲೋಪ-ದೋಷಗಳನ್ನು ಗುಣಪಡಿಸಲು ಏನು ಮಾಡಬಹುದು ಎಂಬ ಬಗ್ಗೆ ಯೋಚನೆ ಮಾಡುತ್ತಾರೆ. ಇಂತಹ ಯೋಚನೆಗಳಿಂದ ಅನೇಕರಿಗೆ ಪ್ರಯೋಜನವಾಗುತ್ತದೆ.

ಋಣಾತ್ಮಕ ಮಾತುಗಳಿಂದ ಯಾವುದೇ ಪ್ರಯೋಜನವಿರುವುದಿಲ್ಲ, ಬದಲಾಗಿ ಅದು ವಾತಾವರಣದಲ್ಲಿ ಋಣಾತ್ಮಕತೆಯನ್ನೂ, ಸುತ್ತಲಿನ ಜನರಲ್ಲಿನಿರುತ್ಸಾಹವನ್ನೂ ತುಂಬುತ್ತದೆ ಅಷ್ಟೇ.

ಆದ್ದರಿಂದ, ನಾನು ಯಾವಾಗಲೂ ಪ್ರತಿಪಾದಿಸುವಂತೆ, ಈ ಸಂದರ್ಭದಲ್ಲಿಯೂ ಸಕಾರಾತ್ಮಕ ಆಲೋಚನೆ ಮತ್ತು ಚಿಕಿತ್ಸಕದೃಷ್ಟಿಕೋನವು ತುಂಬಾ ಅಗತ್ಯ ಎಂದು ಹೇಳಲು ಇಚ್ಛಿಸುವೆ. ನಮ್ಮ ಶಿಕ್ಷಣವು ಕೂಡ ಇದೇ ಮಾದರಿಯಲ್ಲಿ ತನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು. ಈ ದೇಶದಲ್ಲಿ ಸಮಸ್ಯೆಯಿದೆ, ಬಡತನವಿದೆ ಎಂಬುದನ್ನು ಯಾವುದೋ ಒಂದು ಕೆಲಸ ಮಾಡದೇ ಇರುವುದಕ್ಕೆ ಸಮಜಾಯಿಷಿಯ ರೂಪದಲ್ಲಿ ಹೇಳುತ್ತ ಇರಬಾರದು. ಬದಲಾಗಿ, ನನಗೆ ಸಿಕ್ಕಿರುವ ಶಿಕ್ಷಣದ ಮೂಲಕ, ನನಗೆ ಒಲಿದಿರುವ ಕೌಶಲದ ಮೂಲಕ ಅದನ್ನೆಲ್ಲ ಹೇಗೆ ಬಗೆಹರಿಸಬಹುದು ಎಂಬುದನ್ನು ಗಮನಿಸಬೇಕು.

ಹೀಗೆ ಬಹುಸಂಖ್ಯೆಯಲ್ಲಿ ಯುವಜನತೆ ಚಿಕಿತ್ಸಕ ಆಲೋಚನೆಗಳನ್ನು ಮಾಡಿದಲ್ಲಿ ನಮ್ಮ ಸಮಾಜದಲ್ಲಿರುವ ಅನೇಕ ಸಮಸ್ಯೆಗಳು ತಾನಾಗಿಯೇ ಬಗೆಹರಿಯುತ್ತವೆ, ಅದರಲ್ಲಿಯೂ ಯುವಜನತೆಯ ದೃಷ್ಟಿಕೋನವು ನಮ್ಮ ಭವಿಷ್ಯವನ್ನು ರೂಪಿಸುತ್ತದೆ ಅಲ್ಲವೆ?

# ಉಳಿತಾಯ ಖಾತೆ ಚಾಲ್ತಿಯಲ್ಲಿರಬೇಕು!

ಮಹಿಳಾ ದಿನಾಚರಣೆ ಎಂಬುದು ಒಂದು ಸಾಂಕೇತಿಕ ಕಾರ್ಯಕ್ರಮವಾದರೂ ಈ ನೆಪದಲ್ಲಿ ಮಹಿಳೆಯರ ಏಳಿಗೆಯ ಬಗ್ಗೆ ಯೋಚನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಮನೆಯ ಸೂತ್ರಧಾರಿಣಿ,ಮಾರ್ಗದರ್ಶಕಿ ಆಗಿರುವ ಮಹಿಳೆಯು ಎಲ್ಲ ದಿನಗಳಲ್ಲಿಯೂ ಕೇಂದ್ರ ಬಿಂದುವೇ ಆಗಿರುತ್ತಾಳೆ. ಆದರೆ, ಅವಳೇ ಕೇಂದ್ರಬಿಂದು ಎಂದು ಜಗತ್ತೇಕೋ ಒಪ್ಪಿಕೊಳ್ಳುವುದಕ್ಕೆ ನಿರಾಕರಿಸುತ್ತದೆ. ಹಾಗಾಗಿ ಮಹಿಳಾ ದಿನದಂತಹ ಕೆಲವು ಆಚರಣೆಗಳು ಅಗತ್ಯವೆನಿಸುತ್ತದೆ.

ಅದೇನೇ ಇರಲಿ, ಸೆಲ್ಕೋ ಸಂಸ್ಥೆಯ ಕಾರ್ಯೋದ್ದೇಶಗಳೇನಿದ್ದರೂ ಅದು ಮನೆಯನ್ನು ನಿಭಾಯಿಸುವ ಮಹಿಳೆಗೆ ನೆರವಾಗುವ ದೃಷ್ಟಿಯನ್ನು ಹೊಂದಿದೆ. ಯಾಕೆಂದರೆ ಮಹಿಳೆಯ ಸಂಪಾದನೆ, ಆಕೆಯ ಕ್ಷಮತೆಯು ಕುಟುಂಬಿಕರನ್ನು ಕೇಂದ್ರೀಕರಿಸುತ್ತದೆ ಎಂಬುದನ್ನು ಸೆಲ್ಕೋ ಸಂಸ್ಥೆ ಅರಿತುಕೊಂಡಿದೆ. ಆದ್ದರಿಂದ ಸೌರ ದೀಪಗಳಿರಬಹುದು, ಜೀವನೋಪಾಯ ಪರಿಕರಗಳ ಸರಣಿಯಿರಬಹುದು, ಅವುಗಳನ್ನು ಮಹಿಳೆಯರೇ ಹೆಚ್ಚು ಬಳಸುತ್ತಿದ್ದಾರೆ. ಅದರಿಂದ ಆಗುವ ಪ್ರಯೋಜನಗಳೇನು ಎಂಬದುನ್ನು ಅವರೇ ಅರಿತುಕೊಂಡಿದ್ದಾರೆ.

ಅನೇಕ ಮಹಿಳೆಯರು ತಮ್ಮ ಜೀವನದ ಅತ್ಯಂತ ಕಷ್ಟದ ದಿನಗಳಲ್ಲಿ ಸೌರಶಕ್ತಿಯೆಂಬ ಸೇತುವೆಯ ಆಸರೆ ಹಿಡಿದು ಕಷ್ಟವೆಂಬ ನದಿಯನ್ನು ದಾಟಿದ ಉದಾಹರಣೆಗಳಿವೆ. ಸಂಚಲನದಲ್ಲಿ ಪ್ರಕಟವಾದ ಜೀವನೋಪಾಯ ಪರಿಕರಗಳ ಸರಣಿಯನ್ನು ಗಮನಿಸಿದರೆ ಇಂತಹ ಅನೇಕ ಉದಾಹರಣೆಗಳನ್ನು ಗಮನಿಸಬಹುದು. ಈ ವೇಗದ ಓಟದಲ್ಲಿ ತಲ್ಲೀನವಾಗಿರುವ ಸಮಾಜವು, ವಿವಿಧ ಕಾರಣಗಳಿಂದಾಗಿ ಸಮಾಜದ ಅಂಚಿನಲ್ಲಿರುವ ವರಿಗೆ ಕೈಯ್ಯಾಸರೆಯಾಗುವ ವ್ಯವಧಾನವನ್ನು ಹೊಂದಿರುವುದು ಕಡಿಮೆಯೇ. ಆದರೆ, ಅಂತಹ ವ್ಯವಧಾನವನ್ನು ಹೊಂದಿರುವ, ಕಷ್ಟವನ್ನು ಆಲಿಸಿ ಅದಕ್ಕೆ ತಕ್ಕಂತಹ ಪರಿಹಾರವನ್ನು ಕಂಡುಕೊಳ್ಳುವ ಸಾವಧಾನವನ್ನುಸೆಲ್ಕೋ ಸಂಸ್ಥೆ ಹೊಂದಿದೆ. ಅಂತಹ ಪರಿಹಾರ ಪರಿಕರಗಳುಇತರ ಅನೇಕರಿಗೆ ಮಾದರಿಯಾಗಿವೆ.




ಜ್ಞಾನ ಮತ್ತು ಶಿಕ್ಷಣವು ಸಮಾಜದ ಎಲ್ಲರ ಏಳಿಗೆಗೆ ಮತ್ತು ಎಲ್ಲರ ಜೀವನ ಸುಧಾರಣೆಗೆ ಬಳಕೆಯಾಗಬೇಕು ಎಂಬ ಆಶಯದೊಂದಿಗೆ ಸೆಲ್ಕೋ ಸಂಸ್ಥೆ ಈ ಕೆಲಸ ಮಾಡುತ್ತಿದೆ. ಮಹಿಳಾ ದಿನದ ಸಂದರ್ಭದಲ್ಲಿ ಸಂಚಲನ ಪತ್ರಿಕೆಯು ಮಹಿಳೆಯರ ಯಶೋಗಾಥೆಯನ್ನೇ ಪ್ರಧಾನವಾಗಿ ತೆಗೆದುಕೊಂಡಿದೆ. ಅದೇ ರೀತಿ ಸಂತೃಪ್ತ- ಸಮೃದ್ಧಿ ಎಂಬ ಶೀರ್ಷಿಕೆಯಡಿ ಧರ್ಮಸ್ಥಳದಲ್ಲಿ ನಡೆದ ಮಹಿಳಾ ಉದ್ಯಮಿಗಳ ಕಾರ್ಯಾಗಾರದ ವರದಿಯನ್ನೂ ನೀಡಿದೆ. ಒಂದು ಕಥೆಯು ಮತ್ತೊಬ್ಬರ ಜೀವನಕ್ಕೆ ಬೆಳಕಾಗಬಲ್ಲುದಾದರೆ, ಅಂತಹ ಪ್ರಯತ್ನವನ್ನು ಮಾಡಲು ಸಂಚಲನವೂ ಉತ್ಸುಕವಾಗಿದೆ.

ಓದುಗರ ಬೆಂಬಲವಿರಲಿ ಎಂಬ ಆಶಯ ದೊಂದಿಗೆ ಈ ಸಂಚಿಕೆಯನ್ನು ನಿಮ್ಮ ಕೈಲಿಡುತ್ತಿದ್ದೇವೆ.

**ಸೆಲ್ಕೋ ಸಂಪಾದಕೀಯ ಮಂಡಳಿ**

*networkingteam@selco-india.com*

ಸಂಪರ್ಕ : 9880715843



ಮೋಹನ ಭಾಸ್ಕರ ಹೆಗಡೆ
ಸಿಇಓ, ಸೆಲ್ಕೋ ಇಂಡಿಯಾ

# ಜ್ಞಾನ ಏಕೆ? ಬೇಕೆ? ಸಾಕೆ?

ಜ್ಞಾನ ಎನ್ನುವುದು ಮನುಷ್ಯನ ಹೆಗ್ಗಳಿಕೆಯನ್ನು ಪ್ರತಿನಿಧಿಸುವ ಒಂದು ಮಹತ್ವಪೂರ್ಣವಾದ ಶಕ್ತಿ. ಪಶುಗಳಿಗೂ ಪ್ರಾಣಿಗಳಿಗೂ ಮನುಷ್ಯನಿಗೂ ಏನು ವ್ಯತ್ಯಾಸ, ಏನು ಭಿನ್ನತೆ, ಏನು ವಿಶಿಷ್ಟತೆ ಅಂತ ಗಮನಿಸಿದರೆ ನಮಗೆ ಲಬ್ಧವಾಗುವ ಒಂದೇ ಒಂದು ವಿಷಯ ಅದು ಜ್ಞಾನ. ಉಳಿದೆಲ್ಲವೂ ಎಲ್ಲರಲ್ಲಿಯೂ ಇದೆ. ಆದರೆ ಜ್ಞಾನ ಎನ್ನುವುದು ಮಾತ್ರ ವಿಶೇಷವಾಗಿ ಮನುಷ್ಯರಲ್ಲಿ ಕಂಡುಬರುವಂಥದ್ದು. ಅಷ್ಟು ವಿಶೇಷವಾದ ಸಂಪತ್ತನ್ನು ಮನುಷ್ಯ ಸಮರ್ಪಕವಾಗಿ ಬಳಸದೇ ಇದ್ದರೆ, ಅದನ್ನು ಬೆಳೆಸಿಕೊಳ್ಳದೇ ಇದ್ದರೆ ನಷ್ಟವಾಗುವುದು ಮನುಷ್ಯನಿಗೇ ತಾನೆ. ಒಂದು ಪ್ರಸಿದ್ಧವಾದ ಮಾತಿದೆ: *ನಹೀ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ.* ಜ್ಞಾನ ಎನ್ನುವುದು ಅತ್ಯಂತ ಪವಿತ್ರವಾದದ್ದು, ಅದಕ್ಕೆ ಹೋಲಿಸಲು ಸಾಧ್ಯವಿಲ್ಲದಿದ್ದಷ್ಟು ಮಹತ್ವವಾದದ್ದು. ಅಂತಹ ಜ್ಞಾನದ ವಿಷಯದಲ್ಲಿ ನಾವು ಹೇಗೆ ವರ್ತಿಸಬೇಕು, ಹೇಗೆ ಅದನ್ನು ನೋಡಬೇಕು ಎನ್ನುವುದು ಒಂದು ಮಹತ್ವವಾದದ್ದು.

ಜ್ಞಾನ ಏಕೆ ಅಂತ ಕೇಳಿದರೆ, ಜ್ಞಾನವು ಬದುಕಿನ ಸೌಂದರ್ಯಕ್ಕೆ, ಜ್ಞಾನವು ವ್ಯಕ್ತಿತ್ವದ ದರ್ಶನಕ್ಕೆ. ಜ್ಞಾನವು ವ್ಯಕ್ತಿತ್ವವನ್ನು ರೂಪಿಸುತ್ತದೆ. ಜ್ಞಾನ ಏಕೆ ಎಂದು ಪ್ರಶ್ನಿಸುವಾಗ ಜ್ಞಾನವನ್ನು ಯಾವುದಕ್ಕಾಗಿ ಅಂತ ಯೋಚಿಸಬೇಕು. ಆನಂದಕ್ಕಾಗಿ ಜ್ಞಾನ ಬೇಕು. ಒಂದು ವಿಷಯದ ಆಮೂಲಾಗ್ರವಾದ ತಿಳಿವಳಿಕೆ ಒಂದು ವ್ಯಕ್ತಿಯನ್ನು ವಿಶಿಷ್ಟನನ್ನಾಗಿಸುತ್ತದೆ. ಇದಕ್ಕಿಂತ ಹೆಚ್ಚಾಗಿ ಯಾವುದು ಬೇಕು, ಯಾವುದು ಬೇಡ ಎನ್ನುವುದನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಜ್ಞಾನ ಯಾವುದರಿಂದ ಬರುತ್ತದೆ ಎಂದು ಯೋಚಿಸುವಾಗ ಅದು ಕೇವಲ ಓದಿನಿಂದ ಬರುವುದಿಲ್ಲ, ಪುಸ್ತಕಗಳಿಂದ ಬರುವುದಿಲ್ಲ. ಅವುಗಳಿಂದ ಬಂದದ್ದು ಪ್ರಾಯೋಗಿಕವಾಗಿ ಪ್ರಯೋಗಿಸಲ್ಪಟ್ಟಾಗ, ಅದನ್ನು ನಿರಂತರವಾಗಿ ಅಭ್ಯಸಿಸುತ್ತಾ ಸಾಗಿದಾಗ, ಅದರ ಮೇಲೆ ನಿರಂತರವಾದ ಕೃಷಿ ಮಾಡುತ್ತಾ ಇರುವಾಗ ಜ್ಞಾನ ಬರುತ್ತದೆ. ಅದನ್ನು ಬುದ್ಧಿಪೂರ್ವಕವಾಗಿ ಶೋಧಕ ದೃಷ್ಟಿಯಿಂದ ನೋಡುತ್ತ ಹೋಗುವಾಗ ಅದು ವೃದ್ಧಿಸುತ್ತದೆ, ಅದು ಹಿತವಾಗುತ್ತದೆ. ಜ್ಞಾನ ಏಕೆ ಎನ್ನುವುದರ ಉತ್ತರ ಇಲ್ಲಿದೆ.




ಜ್ಞಾನ ಬೇಕೆ ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಂಡರೆ, ಬೇಕಾದದ್ದು ಜ್ಞಾನವಲ್ಲದೆ ಇನ್ನೇನು? ಮನುಷ್ಯ ಹುಟ್ಟಿದಾಗ ಶಿಶುವಾಗಿದ್ದ. ಹುಟ್ಟಿದ ಮರುಕ್ಷಣದಿಂದ ಬಯಕೆಗಳನ್ನು ರೂಢಿಸಿಕೊಂಡ. ಕಣ್ಣು ಬಿಟ್ಟಾಗಲೇ ತಾನು ಅದು ಬೇಕು, ಇದು ಬೇಕು ಎನ್ನುವುದನ್ನು ಪ್ರಾರಂಭಿಸಿದ. ಹಾಗೆಯೇ ಆ ಹುಡುಕಾಟವು ಕೊನೆಯ ತನಕವೂ ಇತ್ತು. ಕಣ್ಣು ಬಿಟ್ಟಾಗ ಯಾವುದನ್ನು ಬಯಸುವುದಕ್ಕೆ ಮುಂದಾದನೋ ಕಣ್ಣು ಮುಚ್ಚುವವರೆಗೂ ಆ ಬೇಕು ಎನ್ನುವುದರ ಹಿಂದೆಯೇ ಓಡಿದ. ಅದಕ್ಕಾಗಿಯೇ ಜೀವನವನ್ನು ಸವೆಸಿದ. ಹೀಗಿರುವಾಗ ಇದರ ಮೌಲಿಕವಾದಂಥ ಜ್ಞಾನ ಎನ್ನುವುದನ್ನು ಕುರಿತು ಬೇಕೇ ಎಂಬ ಸಂದೇಹ ಯಾಕೆ? ಎಂದಿದ್ದರೂ ಬೇಕೇ ಬೇಕು. ಎಲ್ಲರಲ್ಲಿಯೂ

ಜ್ಞಾನ ಇದ್ದೇ ಇರುತ್ತದೆ. ಅದನ್ನು ಪಡೆಯುವ ವಿಷಯದಲ್ಲಿ ಎಲ್ಲರೂ ಪ್ರಯತ್ನಿಸುತ್ತಲೇ ಇರುತ್ತಾರೆ. ಆದರೆ, ಆ ಪ್ರಯತ್ನ ಒಂದು ಕ್ರಮಬದ್ಧವಾಗಿ ಇರದೇ ಇದ್ದರೆ ಅಥವಾ ಆ ಪ್ರಯತ್ನಕ್ಕೊಂದು ಸ್ಪಷ್ಟ ಧೋರಣೆ ಇಲ್ಲದೇ ಇದ್ದರೆ ಅದು ಅಸಮರ್ಪಕ ಎನಿಸುತ್ತದೆ.

### ಇನ್ನು ಮೂರನೆಯ ಪ್ರಶ್ನೆ

ಜ್ಞಾನ ಸಾಕೆ? ಇದು ಎಂದೂ ಸಾಕಾಗುವುದಿಲ್ಲ, ಎಲ್ಲಿಯವರೆಗೆ ಜೀವನ ಎನ್ನುವುದು ನಡೆಯುತ್ತಿರುತ್ತದೆಯೋ ಅಲ್ಲಿಯವರೆಗೂ ಜ್ಞಾನಕ್ಕೆ ಸಾಕು ಎನ್ನುವುದಿಲ್ಲ, ನಮ್ಮ ಯಕ್ಷಗಾನದ ಗುರುಗಳು, ಮಹಾನ್ ತತ್ವಜ್ಞಾನಿ ಡಾ ಮಹಾಬಲ ಹೆಗಡೆಯವರು ರಾಮನ ಪಾತ್ರವನ್ನು ಹಾಕಿಕೊಂಡಾಗ ಲವ-ಕುಶರಲ್ಲಿ ಈ ಮಾತನ್ನು ಹೇಳುತ್ತಾರೆ ಎನ್ನುವುದು ಜೀವನ, ಸಾಕು ಎನ್ನುವುದು ಸಾವು. ಬೇಕು ಎನ್ನುವುದು ಬದುಕು, ಸಾಕು ಎನ್ನುವುದು ಸಾವು. ಮಾತನ್ನು ಹೇಳುತ್ತಾರೆ. ಎಷ್ಟು ಅರ್ಥಪೂರ್ಣವಾದ ಮಾತಿದು. ಜ್ಞಾನದ ವಿಷಯದಲ್ಲಿ ಸಾಕು ಅಂತನಿಸಿದ ಅಲ್ಲಿಗೆ ಸಾವು ಬಂದ ಹಾಗೆ. ಎಲ್ಲ ಕ್ರಿಯಾತ್ಮಕಗಳು ಸ್ತಬ್ಧವಾಗುತ್ತವೆ. ಆದ್ದರಿಂದ ಜ್ಞಾನ ಸಾಕು ಎನಿಸಲಾರದು. ಸಾಕು ಎನಿಸಲೂ ಬಾರದು. ಈ ದೃಷ್ಟಿಯಿಂದ ಜ್ಞಾನವನ್ನು ನಾವು ಗ್ರಹಿಸುವಾಗ ಜ್ಞಾನವು ಏಕೆ ಅಂದರೆ ಅದು ಜೀವನದ ಅತ್ಯಮೂಲ್ಯವಾದ ಸಂಪತ್ತು ಅದಕ್ಕೆ.



ಜ್ಞಾನವು ಬೇಕೆ? ಎಂದೆಂದಿಗೂ ಬೇಕು. ಅದರಲ್ಲಿ ಅನುಮಾನವು ಇರಲೇಬಾರದು. ಜ್ಞಾನವು ಸಾಕೇ ಅಂತ ಕೇಳಿದರೆ ಅದು ಎಂದಿಗೂ ಸಾಕಾಗಲಾರದು. ಅದು ಬತ್ತದ ಭಾವ. ನಿರಂತರವಾಗಿ ಪ್ರವಹಿಸುತ್ತಲೇ ಇರಬೇಕು. ಈ ದೃಷ್ಟಿಯಿಂದ ಮನುಷ್ಯನ ಹಲವು ಕ್ರಿಯೆಗಳನ್ನು ಗಮನಿಸಿದರೆ ಎಲ್ಲದರಲ್ಲಿಯೂ ಜ್ಞಾನ ಬೇಕು. ಅದು ವೃತ್ತಿಯಿರಲಿ ಪ್ರವೃತ್ತಿಯಿರಲಿ. ಎಲ್ಲದರಲ್ಲಿಯೂ ಒಂದು ವಿಶಿಷ್ಟವಾಗಿ ಗುರುತಿಸಲ್ಪಡಬೇ ಅಂತಾದರೆ, ಗೌರವಿಸಲ್ಪಡಬೇಕು ಅಂತಾದರೆ, ಯಶಸ್ವಿಯಾಗಬೇಕು ಅಂತಾ ಅತ್ಯಗತ್ಯವಾಗಿ ಬೇಕಾದದ್ದು ಜ್ಞಾನ. ಜ್ಞಾನವನ್ನು ಹೇಗೆ ವಿನಿಯೋಗಿಸು ಎನ್ನುವುದರ ಮೇಲೆ ಅದರ ಸೌಂದರ್ಯ ಅಡಕವಾಗಿದೆ.



ಒಂದೊಂದು ವೃತ್ತಿಯವರು ಒಂದೊಂದು ರೀತಿಯಲ್ಲಿ ತಮ್ಮ ಜ ವಿವರಿಸಬೇಕಾಗುತ್ತದೆ; ಅನಿವಾರ್ಯವಾಗಿ. ಸಂಶೋಧಕನಾದವನು ಸಂಶೋಧಕ ಚಿತ್ತದಲ್ಲಿದ್ದು, ಅದನ್ನು ವಿವರಿಸಬೇಕು. ಒಬ್ಬ ತಾಂತ್ರಿ ತಾಂತ್ರಿಕತೆಯನ್ನೇ ವಿವರಿಸುತ್ತಾ ತನ್ನ ಜ್ಞಾನವನ್ನು ತೋರ್ಪಡಿಸಬೇಕು. ಒ ಹೊಂದಿದ ವ್ಯಕ್ತಿ, ವಿಶಿಷ್ಟ ಕೌಶಲವನ್ನು ಹೊಂದಿದ ವ್ಯಕ್ತಿ ವಿಶಿಷ್ಟತೆಯಿಂದಲೇ ತೋರ್ಪಡಿಸಬೇಕು. ಎಲ್ಲ ವರ್ಗದ ಜನರು ತನ್ನ ತನ್ನ ಅಧಿಕಾರದ ವ್ಯಾಪ್ತಿ ಆಧಾರವಾಗಿಟ್ಟು ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಅದು ನಿರಂತರವಾಗಿ ಸಾಗುತ್ತಾ ಇದ್ದರೆ ಯಾವತ್ತೂ ಪ್ರಖರವಾಗಿರುತ್ತದೆ, ಪ್ರಭಾವಯುತವಾಗಿರುತ್ತದೆ.

ಸಾಕು ಎನ್ನುವುದನ್ನು ಒಮ್ಮೆ ಮನಸ್ಸಿಗೆ ಅಳವಡಿಸಿಕೊಂಡರೆ ಮತ್ತೆ ಜ್ಞಾನ ವೃದ್ಧಿಯಾಗುವುದಿಲ್ಲ, ಬೇಕು ಎನ್ನುವುದನ್ನು ವಿನಮ್ರವಾಗಿ ಸ್ವಾಗತಿಸಿದರೆ ಜ್ಞಾನವು ವೃದ್ಧಿಯಾಗುತ್ತದೆ. ಜ್ಞಾನವೃದ್ಧರನ್ನು ಸರ್ವರೂ ಗೌರವಿಸುತ್ತಾರೆ. ಆದರೆ ಜ್ಞಾನ ಜಾಡ್ಯನನ್ನು ಸರ್ವರೂ ತಿರಸ್ಕರಿಸುತ್ತಾರೆ. ಯಾವ ಯಾವ ಕ್ಷೇತ್ರದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತೇವೆಯೋ ಆ ಎಲ್ಲ ಕ್ಷೇತ್ರಗಳಲ್ಲಿ ಜ್ಞಾನವನ್ನು ವೃದ್ಧಿಸುವ ವಿಷಯದಲ್ಲಿ ಪ್ರಯತ್ನಶೀಲರಾಗಬೇಕೇ ವಿನಾ ನಮ್ಮನಮ್ಮ ಸೋಮಾರಿತನಗಳನ್ನು ಮುಂದಿಟ್ಟು, ಅಸಹಾಯಕತೆಯನ್ನು, ಅಸೂಯೆ, ಮತ್ಸರ ಮೊದಲಾದ ಭಾವಗಳನ್ನು ಮುಂದಿಟ್ಟು, ಜ್ಞಾನವನ್ನು ಸ್ವೀಕರಿಸುವಲ್ಲಿ ವಂಚಿತರಾದರೆ ಜ್ಞಾನವೂ ನಮ್ಮನ್ನು ಬಿಟ್ಟು ದೂರ ಸಾಗುತ್ತದೆ. ಅಲ್ಲಿಗೆ ಮನುಷ್ಯನ ಬದುಕು ಕೊನೆಯಾಗುತ್ತದೆ. ಆದುದರಿಂದ ಜ್ಞಾನವು ಯಾವತ್ತೂ ಸ್ವೀಕಾರಾರ್ಹ, ಸ್ವಾಗತಾರ್ಹ ಮತ್ತು ಅದು ನಿರಂತರವಾಗಿ ಅನುಸಂಧಾನ ಮಾಡುವಂಥ ಒಂದು ಅಪೂರ್ವವಾದ ಯಜ್ಞ. ಆದುದರಿಂದ ಜ್ಞಾನಿಗಳಾಗೋಣ, ಜ್ಞಾನಿಗಳನ್ನಾಗಿಸೋಣ, ಜ್ಞಾನಿಗಳನ್ನಾಗಿಸುತ್ತಾ ಜ್ಞಾನಿಗಳಾಗುವ ದಿಸೆಯಲ್ಲಿ ಹೆಜ್ಜೆ ಇಡೋಣ. ಇದೇ ಇಂದಿನ ಅಪೇಕ್ಷೆ.

# ರವಿಯ ಬೆಳಕಿನಲ್ಲಿ ಸವಿಯ ವಿಚಾರ

## ಸೆಲ್ಕೊ ಬೆಳಕಿನಲ್ಲಿ ಹೊಸ ಬದುಕನ್ನು ರೂಪುಗೊಳಿಸಿದ ರೂಪಾ



**ಕರಿಸ್ವಾಮಿ ಕೆ.**
ಎಜಿಎಂ, ಸೆಲ್ಕೋ, ಬೆಂಗಳೂರು

**ತಕ್ಷಣದಲ್ಲಿ ದುಡಿಯಬೇಕೆಂಬ ಯಾವುದೇ ಅನಿವಾರ್ಯತೆಗಳಿರದಿದ್ದರೂ ತಾನೊಬ್ಬ ಉದ್ಯಮಿಯಾಗಬೇಕು, ಆ ಮೂಲಕ ನಾಲ್ಕಾರು ಜನರಿಗೆ ಉದ್ಯೋಗ ಕೊಡಬೇಕೆಂಬ ಮನೋಭಾವ ಮತ್ತು ಅದನ್ನು ಸಾಧಿಸುವ ಛಲವಿದ್ದರೆ ಎಂತಹ ಕನಸನ್ನು ಬೇಕಾದರೂ ನನಸು ಮಾಡಿಕೊಳ್ಳಬಹುದು ಎಂಬುದಕ್ಕೆ ಹುಬ್ಬಳ್ಳಿಯ ಉಣಕಲ್ಲದ ಸಾಯಿನಗರದ ರೂಪಾ ಎಚ್. ಶ್ರೀಹರಿ ಅವರು ಉದಾಹರಣೆಯಾಗಿದ್ದಾರೆ. ಏಳೆಂಟು ರೀತಿಯ ಸಂಪೂರ್ಣ ಸೌರಶಕ್ತಿ ಚಾಲಿತ ವ್ಯವಸ್ಥೆಯ ಮೂಲಕವೇ ಗೃಹೋದ್ಯಮದ ಅನೇಕ ಸಾಧ್ಯತೆಗಳನ್ನು ತೆರೆದಿಟ್ಟಿರುವ ಅವರು, ಸಿಹಿ ತಿನಿಸುಗಳ ತಯಾರಿಕೆಯ ವೈವಿಧ್ಯಮಯ ಲೋಕವೊಂದನ್ನೇ ಸೃಷ್ಟಿಸಿರುವ ಅವರ ಮಾದರಿಯು ಇತರ ಹೆಣ್ಣುಮಕ್ಕಳಿಗೂ ಸ್ಫೂರ್ತಿದಾಯಕವೂ ಅನುಕರಣೀಯವೂ ಆಗಿದೆ.**

ಹತ್ತನೆಯ ತರಗತಿಯವರೆಗೆ ತನಕ ಕಲಿತಿರುವ ರೂಪಾ ಎಚ್. ಶ್ರೀಹರಿ ಅವರು, ಉದ್ಯೋಗಿಯಾಗಿರುವ ಗಂಡ ಹನುಮ ರೆಡ್ಡಿ, ಪದವಿ ಓದುತ್ತಿರುವ ಮಗ, 10ನೇ ತರಗತಿ ಓದುತ್ತಿರುವ ಒಬ್ಬ ಮಗಳು ಹಾಗೂ ತನ್ನ ಅಣ್ಣನ ಮಗನೂ ಸೇರಿದಂತೆ ಐದು ಜನರ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದಾರೆ.

ಕಳೆದ ಏಳೆಂಟು ವರ್ಷಗಳಿಂದ ಟೈಲರಿಂಗ್ ಅನ್ನು ವೃತ್ತಿಯಾಗಿಸಿಕೊಂಡಿದ್ದ ಅವರು, ಇದಕ್ಕೂ ಮುಂಚೆ ಸುಮಾರು 14 ವರ್ಷಗಳಿಂದಲೂ ದಿನಗಳಲ್ಲಿ ಧಾರವಾಡದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ)ಯ ಮಹಿಳಾ ಸ್ವ-ಸಹಾಯ ಗುಂಪಿಗೆ ಸೇರಿಕೊಂಡಿದ್ದರು. ಸ್ವ-ಸಹಾಯ ಸಂಘದ ಸಾರಥ್ಯವನ್ನೂ ವಹಿಸಿದರು. ಅಲ್ಲಿ ಸಿಕ್ಕಿದ ವಿವಿಧ ರೀತಿಯ ತರಬೇತಿಗಳಿಂದ ಉದ್ಯಮಿಯಾಗುವ ಕನಸು ಕಂಡರು. ಅದರ ಫಲವಾಗಿ ಸಿಹಿ ತಿಂಡಿಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ಸಣ್ಣ ಮಟ್ಟದಲ್ಲಿ ಗೃಹೋದ್ಯಮವನ್ನು ಆರಂಭಿಸಿದರು.



### ಆರಂಭಿಕ ಹೆಜ್ಜೆಗಳು

ವೈವಿಧ್ಯಮಯವಾದ ಸಿಹಿ ತಿಂಡಿಗಳೊಂದಿಗೆ ಬಾಡಿಗೆ ಮನೆಯಲ್ಲಿ ಆರಂಭವಾದ ರೂಪಾ ಅವರ ಗೃಹೋದ್ಯಮದ ಪಯಣವು, ಗುಣಮಟ್ಟ ಮತ್ತು ಬದ್ಧತೆಯ ಸೇವೆಯ ಕಾರಣದಿಂದ ಬೇಗ ಉತ್ತುಂಗಕ್ಕೇರಿತು. ಬೇಸನ್ ಉಂಡಿ, ಮೋತಿಚೂರ ಲಡಕಿ ಪಾಕ್, ರವಾ ಉಂಡಿ, ಕರದಂಟು, ಅಂಟಿನ ಉಂಡಿ. ಚಕ್ಕಲಿ, ಅವಲಕ್ಕಿ ಚೂಡಾ, ಇನ್ನೂ ಅನೇಕ ತರಹದ ಸ್ವೀಟ್‌ಗಳನ್ನು ತಯಾರು ಮಾಡುತ್ತಿದ್ದರು. ರೂಪಾ ಅವರು ಆರಂಭದಿಂದಲೂ ಸ್ವತಃ ತೊಡಗಿಸಿಕೊಂಡದ್ದಲ್ಲದೆ ಅಗತ್ಯ ಬಿದ್ದಾಗಲೆಲ್ಲ ಸಹಾಯಕ್ಕಾಗಿ ಇತರ ಮಹಿಳೆಯರನ್ನೂ ಕೆಲಸಕ್ಕೆ ಕರೆದುಕೊಳ್ಳುತ್ತಿದ್ದರು. ಬೇಡಿಕೆ ದಿನೇ ದಿನೇ ಹೆಚ್ಚಾಗತೊಡಿದಾಗ ಅದರ ವಿಸ್ತರಣೆ ಅನಿವಾರ್ಯವಾಯಿತು. ಬಾಡಿಗೆ ಮನೆಯಲ್ಲಿ ಜಾಗ ಸಾಕಾಗದೆ ಅವರು ತಾವು ವಾಸವಿದ್ದ ಮನೆಯ ಪಕ್ಕದಲ್ಲಿದ್ದ ಖಾಲಿ ನಿವೇಶನದಲ್ಲಿ ಉದ್ಯಮವನ್ನು ಕಟ್ಟುವ ಮೂಲಕ ವಿಸ್ತರಿಸಲು ನಿರ್ಧರಿಸಿದರು. ಅಲ್ಲಿದ್ದ ಸುಮಾರು 30 ಅಡಿ ಉದ್ದ ಮತ್ತು 30 ಅಡಿ ಅಗಲದ ಅಳತೆಯ ನಿವೇಶನದಲ್ಲಿ ಸುಮಾರು 3.5 ಲಕ್ಷ ರೂ. ಖರ್ಚು ಮಾಡಿ ಶೆಡ್ ಹಾಕಿದರು. ಇದಕ್ಕೆ ಪ್ರತಿ ತಿಂಗಳೂ 3200 ರೂ. ಗಳನ್ನು ಬಾಡಿಗೆಯಾಗಿ ಕೊಡುತ್ತಾರೆ.

### ಸೌರಶಕ್ತಿಯ ಸಾಧ್ಯತೆ

ಈ ವೇಳೆಗಾಗಲೇ ಸುಮಾರು 6 ಮಂದಿ ಸಹಾಯಕರೊಂದಿಗೆ ಕೆಲಸ ಮಾಡುತ್ತಿದ್ದರೂ ಬೇಡಿಕೆ ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಏರುತ್ತಿದ್ದ ಬೇಡಿಕೆಗೆ ಅನುಗುಣವಾಗಿ ಉದ್ಯಮದ ವಿಸ್ತರಣೆಗೆ ಕೈ ಹಾಕಿದ ಅವರಿಗೆ ದೊಡ್ಡ ಮಟ್ಟದ ಸವಾಲು ಎದುರಾಗಿದ್ದು  ನಿರಂತರ ವಿದ್ಯುತ್ತಿನದು. ಈ ಸಂಬಂಧ ಅವರು ಹುಡುಕಾಟ ನಡೆಸುತ್ತಿದ್ದಾಗ ಧರ್ಮಸ್ಥಳ ಸಂಘದ ಮೂಲಕ ಸೆಲ್ಕೋ ಸಂಸ್ಥೆಯ ಸಂಪರ್ಕಕ್ಕೆ ಬಂದರು. ಮೊದಲಿಗೆ ಅವರು ತಾವು ಈಗಾಗಲೇ ಮಾಡುತ್ತಿದ್ದ ಸಿಹಿ ತಿನಿಸುಗಳ ಜೊತೆಗೆ ಖೋವಾ ತಯಾರಿಸುವ ಸಲುವಾಗಿ ಸೌರಶಕ್ತಿಚಾಲಿತ ಖೋವಾ ಯಂತ್ರವನ್ನು

ಅಳವಡಿಸಿಕೊಂಡರಾದರೂ ಅದನ್ನು ಮುಂದೆ ಲಡ್ಡು ತಯಾರಿಕೆಗಾಗಿ ಉಪಯೋಗಿಸತೊಡಗಿದರು. ಇದರ ಜೊತೆಗೆ ಪ್ರತ್ಯೇಕವಾಗಿ ಬೆಲ್ಲ ಮತ್ತು ತೆಂಗಿನ ಕಾಯಿಯನ್ನು ಅರೆಯುವ ಎರಡು ಕ್ರಶರ್‌ಗಳು, ಒಂದು ವಿವಿಧ ರೀತಿಯ ಖಾರ, ಸೇವ್‌ಗಳ ಮಿಶ್ರಣಕ್ಕಾಗಿ ಒಂದು ಮಿಕ್ಸಿಂಗ್ ಯಂತ್ರ, ಎರಡು ಲೈಟ್‌ಗಳ ವ್ಯವಸ್ಥೆಯನ್ನು ಅಳವಡಿಸಿಕೊಂಡರು.



ಮುಂದೆ ಅಗತ್ಯಕ್ಕನುಗುಣವಾಗಿ ತಿನಿಸುಗಳನ್ನು ಒಣಗಿಸಲು ಅನುಕೂಲವಾಗುವ ಸೌರಶಕ್ತಿಚಾಲಿತ ಡ್ರೈಯರ್, ಹಿಟ್ಟನ್ನು ಕಲೆಸಲು ಬೇಕಾದ ಅಟ್ಟಾ ನೀಡರ್‌ಗಳನ್ನು ಅಳವಡಿಸಿಕೊಂಡರು. ತಮ್ಮ ಉತ್ಪನ್ನಗಳ ತಯಾರಿಕೆ, ಗುಣಮಟ್ಟ ಮತ್ತು ವೈವಿಧ್ಯವನ್ನು ಕಾಪಾಡಿಕೊಳ್ಳಲು ಯೂ ಟ್ಯೂಬ್‌ಅನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡ ರೂಪಾ ಅವರು ಅದನ್ನು ಎಲ್ಲ ಹಂತಗಳಲ್ಲೂ ವಿಸ್ತರಿಸಿದರು.

### ಸಿಹಿ ತಿಂಡಿಗಳ ವೈವಿಧ್ಯ ಮತ್ತು ವಿಶೇಷತೆ

ಈಗಾಗಲೇ ಹೆಸರಿಸಿರುವ ಕೆಲವು ತಿಂಡಿಗಳೂ ಸೇರಿದಂತೆ ರಾಗಿ ಮಿಕ್ಸರ್ ರವೆ ಉಂಡೆ, ಅಂಟಿನುಂಡೆ, ಹಾಲಿನ ಪೇಡಾ, ಅವಲಕ್ಕಿ ಚಕ್ಕುಲಿ ಹಾಗೂ ಹೆಸರು, ಕಡ್ಲೆಬೇಳೆ ಮುಂತಾದ ಕಾಳುಗಳ ಹಿಟ್ಟಿನಿಂದ ತಯಾರಾದ ಲಡ್ಡುಗಳು, ಡ್ರೈ ಫ್ರುಟ್ಸ್ ಲಡ್ಡು, ಟಿಕ್ಕಿ, ಬರ್ಫಿ ಹಾಗೂ ಸಿರಿಧಾನ್ಯದ ಉತ್ಪನ್ನಗಳಿವೆ. ತಮ್ಮ ಉತ್ಪನ್ನಗಳನ್ನು ಸ್ನೇಹ ಮಹಿಳಾ ಗೃಹ ಉದ್ಯೋಗ ಸಂಸ್ಥೆ ಎಂಬ ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಅವರು ತಯಾರಿಸುವ ತಿನಿಸುಗಳ ಪೈಕಿ ಅತ್ಯಂತ ಹೆಚ್ಚಿನ ಬೇಡಿಕೆ ಇರುವುದು ಲಡಕಿ ಪಾಕ್, ಬೇಸನ್ ಉಂಡಿ, ನಾಲ್ಕೈದು ರೀತಿಯ ಅವಲಕ್ಕಿ ಹಾಗೂ ಇತರ ಸಿಹಿ ತಿನಿಸುಗಳಿಗೆ. ಇದರ ಜೊತೆಗೆ ಸುಮಾರು 15 ರೀತಿಯ ಸಿಹಿಗಳೂ ಬೇಡಿಕೆ ಪಡೆದಿವೆ.

> *ಸೌರಶಕ್ತಿ ವ್ಯವಸ್ಥೆಯಿಂದ ಅನೇಕ ಲಾಭಗಳಿವೆ. ಸೌರಶಕ್ತಿಯ ಸಂಪರ್ಕ ನಿರಂತರವಾಗಿ ಇರುವುದರಿಂದ ಧೈರ್ಯವಾಗಿ ಎಂತಹ ದೊಡ್ಡ ಬೇಡಿಕೆಯನ್ನಾದರೂ ಒಪ್ಪಿಕೊಳ್ಳಬಹುದು. ಸಹಾಯಕರ ಮೇಲೆ ಅವಲಂಬಿಸಬೇಕಾಗಿಲ್ಲ. ಅವರ ಖರ್ಚಿನ ಜೊತೆಗೆ ವಿದ್ಯುತ್ ಖರ್ಚು, ಸಮಯದ ಉಳಿತಾಯವಾಗುತ್ತದೆ. ನಾನು ಉದ್ಯಮಿಯಾಗಲು ಸೆಲ್ಕೋ ಸಂಸ್ಥೆ ಮತ್ತು ಧರ್ಮಸ್ಥಳ ಸಂಘಗಳು ಕಾರಣವಾಗಿದ್ದು ಅವುಗಳಿಗೆ ಋಣಿಯಾಗಿರುವೆ.*
>
> **–ರೂಪಾ ಎಚ್. ಶ್ರೀಹರಿ,**
> **ಸಾಯಿನಗರ, ಉಣಕಲ್ಲ, ಹುಬ್ಬಳ್ಳಿ**

### ಸೌರಶಕ್ತಿಯ ಪರಿಣಾಮ

ಈ ಹಿಂದೆ ಮೂರ್ನಾಲ್ಕು ಜನರ ಸಹಕಾರದಿಂದ ದಿನಕ್ಕೆ 5 ರಿಂದ 10 ಕೆಜಿ ಯ ಲಡಕಿ ಪಾಕ್ ಮಾಡುತ್ತಿದ್ದ ಅವರು, ಈಗ ಸೌರಶಕ್ತಿಚಾಲಿತ ವ್ಯವಸ್ಥೆ ಬಂದ ಮೇಲೆ. ಮದುವೆ ಸೀಮಂತ, ನಾಮಕರಣ ಮುಂತಾದ ಶುಭ ಸಮಾರಂಭಗಳಿಗೆ ಸುಮಾರು 70 ರಿಂದ 80 ಕೆ.ಜಿ. ಗಳವರೆಗೂ ತಯಾರಿಸಿ ಕೊಡಲು ಸಾಧ್ಯವಾಗುತ್ತಿದೆ. ಈಗ ಅವರು 1000 ಮಂದಿ ಭಾಗವಹಿಸಬಹುದಾದ ಕಾರ್ಯಕ್ರಮಗಳಿಗೆ ಅಡುಗೆ ವ್ಯವಸ್ಥೆಯನ್ನೂ ಮಾಡಿಕೊಡುವಷ್ಟು ಸಾಮರ್ಥ್ಯ ಹೊಂದಿದ್ದಾರೆ.

### ಮಾರುಕಟ್ಟೆ

ಈ ಎಲ್ಲ ಉತ್ಪನ್ನಗಳ ತಯಾರಿಕೆಗೆ ಬೇಕಾದ ಮೂಲ ವಸ್ತುಗಳನ್ನು ಅವರು ಹುಬ್ಬಳ್ಳಿಯ ಎಪಿಎಂಸಿಯಿಂದಲೇ ಖರೀದಿಸುತ್ತಾರೆ. ಎಲ್ಲವನ್ನು ಸ್ಥಳೀಯವಾಗಿಯೇ ಮಾರಾಟ ಮಾಡುತ್ತಾರೆ. ಅನೇಕ ಜನರು ಅಂಗಡಿಗೆ ಬಂದು ಒಯ್ಯುತ್ತಾರೆ. ಕೆಲವು ಸ್ಥಳೀಯ ಅಂಗಡಿಗಳು ಮತ್ತು ದೊಡ್ಡ ಆರ್ಡರ್‌ಗಳನ್ನು ಇವರೇ ಹೋಗಿ ಕೊಟ್ಟು ಬರುತ್ತಾರೆ. ರಾಗಿ ಮಿಕ್ಸ್ ಮತ್ತು ಲಡಕಿ ಪಾಕ್ ಅನ್ನು ತಲಾ ಕೆ.ಜಿ.ಗೆ 320 ರೂ., ಬೇಸಿನ್ ಲಡ್ಡು ಅನ್ನು 460, ಅವಲಕ್ಕಿಯನ್ನು 300 ರೂ.ಗೆ ಮಾರಾಟ ಮಾಡುತ್ತಾರೆ. ವಿವಿಧ ಇಲಾಖೆ ಮತ್ತು ಸಂಸ್ಥೆಗಳ ಸಹಯೋಗದಲ್ಲಿ ನಡೆಯುವ ವಸ್ತು ಮತ್ತು ಆಹಾರ ಪದಾರ್ಥಗಳ ಪ್ರದರ್ಶನಗಳಲ್ಲಿ ತಮ್ಮ ಮಳಿಗೆಯನ್ನು ಹಾಕುವ ಮೂಲಕ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ.

### ಹಣಕಾಸಿನ ವ್ಯವಸ್ಥೆ

ಈ ಗೃಹೋದ್ಯಮದ ಸಂಪೂರ್ಣ ವ್ಯವಸ್ಥೆಯನ್ನು ಕಟ್ಟಲು ರೂಪಾ ಸುಮಾರು 15 ಲಕ್ಷ ರೂ. ಅನ್ನು ತೊಡಗಿಸಿದ್ದಾರೆ. ಎಲ್ಲ ರೀತಿಯ ಯಂತ್ರಗಳಿಗೆ ಸುಮಾರು 9 ಲಕ್ಷ ರೂ. ಅನ್ನು ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಅಭಿವೃದ್ಧಿಗಾಗಿ ಇರುವ (ಪಿ.ಎಂ.ಎಫ್.ಎಂ.ಇ) ಯೋಜನೆ ಅಡಿಯಲ್ಲಿ ಎಸ್‌ಬಿಐನಿಂದ ಲೋನ್ ಪಡೆದಿದ್ದಾರೆ. ಸಾಲದ ಕಂತಾಗಿ ಪ್ರತೀ ತಿಂಗಳು 12 ಸಾವಿರ ರೂ. ಅನ್ನು ತುಂಬುತ್ತಿದ್ದಾರೆ.

### ಸೆಲ್ಕೋ ಸಂಸ್ಥೆಯ ಪಾತ್ರ

ಈ ಎಲ್ಲ ಯಂತ್ರಗಳಿಗೆ ಸೌರಶಕ್ತಿಚಾಲಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸುಮಾರು 4 ಲಕ್ಷ ರೂ. ಅನ್ನು ವ್ಯಯಿಸಿದ್ದಾರೆ. ಇದಕ್ಕಾಗಿ ಸೆಲ್ಕೋ ಸಹಾಯದ ಜೊತೆಗೆ ಸುಮಾರು 80 ಸಾವಿರ ರೂ. ಅನ್ನು ಭರಿಸಿದ್ದಾರೆ.

# ಸಾಮಾಜಿಕ ಸ್ಟಾಕ್ ಎಕ್ಸ್‌ಛೇಂಜ್ ಎಂಬ ಹೊಸ ಪರಿಕಲ್ಪನೆ



**ಪ್ರದ್ಯುಮ್ನ ಯು. ಕೆ.**
ಚೀಫ್ ಫೈನಾನ್ಸ್ ಆಫೀಸರ್

'ಭಾನುಪುರ' ಎಂಬ ಕಾಲ್ಪನಿಕ ನಗರದಲ್ಲಿ ಪ್ರಯಾಸ್ ಎಂಬ ದೂರದೃಷ್ಟಿಯುಳ್ಳ ಕಂಪನಿ ಕಾರ್ಯನಿರ್ವಹಿಸುತ್ತಿದ್ದು, ಇದು ಸೌರಶಕ್ತಿಯನ್ನು ಬಳಸಿಕೊಳ್ಳುವ ಗುರಿಯನ್ನು ಹೊಂದಿದೆ ಮತ್ತು ದೇಶದಲ್ಲಿನ ಅಂಚಿನಲ್ಲಿರುವ ಸಮುದಾಯಗಳಿಗೆ ಸುಸ್ಥಿರ ಇಂಧನ ಪರಿಹಾರಗಳನ್ನು ಒದಗಿಸುತ್ತದೆ. ಸಂಸ್ಥಾಪಕರಾದ ರವಿ ಮತ್ತು ಪ್ರಭಾ ಅವರಿಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಹಣವನ್ನು ಹೊಂದಿಸಿಕೊಳ್ಳುವುದು ಸವಾಲಾಗಿತ್ತು. ಆ ಸಂದರ್ಭದಲ್ಲಿ ಅವರು ಸಾಮಾಜಿಕ ಸ್ಟಾಕ್ ಎಕ್ಸ್‌ಛೇಂಜ್ (ಎಸ್‌ಎಸ್‌ಇ) ಪರಿಕಲ್ಪನೆಯನ್ನು ಆಧರಿಸಿ ಕೆಲಸ ಮಾಡಲು ನಿರ್ಧರಿಸಿದರು.

ಎಸ್‌ಎಸ್‌ಇ ನಲ್ಲಿ ಪ್ರಯಾಸ್ ಉಪಸ್ಥಿತಿಯು ಸುಸ್ಥಿರತೆ ಮತ್ತು ನವೀನ ಸೌರ ಪರಿಹಾರಗಳಿಗೆ ಇರುವ ಬದ್ಧತೆಯನ್ನು ಸಾಬೀತುಪಡಿಸಿತು. ಇದು ನವೀಕರಿಸಬಹುದಾದ ಶಕ್ತಿಯ ಸಾಮರ್ಥ್ಯವನ್ನು ನಂಬಿದ ಹೂಡಿಕೆದಾರರನ್ನು ಕೂಡ ಆಕರ್ಷಿಸಿತು. ಪ್ರಯಾಸ್ ಸಂಗ್ರಹಿಸಿದ ನಿಧಿಯು ದೂರದ ಹಳ್ಳಿಗಳಲ್ಲಿ ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಸಹಕಾರಿಯಾಯಿತು. ಗ್ರಾಮೀಣ ಭಾಗದ ಅನೇಕ ಕುಟುಂಬಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿತು, ಉದ್ಯೋಗಗಳನ್ನು ಸೃಷ್ಟಿಸಿತು ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿತು. ಪ್ರಯಾಸ್‌ನ ಯಶಸ್ಸು ಇತರರಿಗೆ ಸ್ಫೂರ್ತಿಯಾಗಿದ್ದು, ಸಾಮಾಜಿಕ ಮತ್ತು ಪರಿಸರದ ಉದ್ದೇಶಗಳೊಂದಿಗೆ ಹಣಕಾಸಿನ ಹೂಡಿಕೆಗಳನ್ನು ಜೋಡಿಸುವುದರಿಂದ ಧನಾತ್ಮಕ ಬದಲಾವಣೆಯನ್ನು ಉಂಟುಮಾಡುತ್ತದೆ ಎಂಬುದು ಖಾತ್ರಿಯಾಯಿತು.

2019 ರಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಾಮಾಜಿಕ ಷೇರು ವಿನಿಮಯ (social stock exchange-ಎಸ್‌ಎಸ್‌ಇ) ರಚನೆಯ ಸಾಧ್ಯತೆಯನ್ನು ಪ್ರಸ್ತಾಪಿಸಿದರು. ಇದು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಛೇಂಜ್ ಬೋರ್ಡ್ ಆಫ್ ಇಂಡಿಯ (ಎಸ್‌ಇಬಿಐ)ದ ನಿಯಂತ್ರಕ ವ್ಯಾಪ್ತಿಯ ಅಡಿಯಲ್ಲಿ ಇಲೆಕ್ಟ್ರಾನಿಕ್ ನಿಧಿಸಂಗ್ರಹಣೆಯ ಒಂದು ವೇದಿಕೆಯಾಗಿದೆ. ಸಾಮಾಜಿಕ ಉದ್ಯಮಗಳು ಮತ್ತು ಸ್ವಯಂಸೇವಾ ಸಂಸ್ಥೆಗಳನ್ನು ಪಟ್ಟಿ ಮಾಡುವುದಕ್ಕಾಗಿ ಸಮಾಜ ಕಲ್ಯಾಣ ಉದ್ದೇಶದ ಸಾಕ್ಷಾತ್ಕಾರಕ್ಕಾಗಿ ಅವರು ಬಂಡವಾಳವನ್ನು ಇಕ್ವಿಟಿ, ಸಾಲ ಅಥವಾ ಮ್ಯೂಚುವಲ್ ಫಂಡ್‌ನಂಥ ಘಟಕಗಳಾಗಿ ಸಂಗ್ರಹಿಸಬಹುದು ಎಂದು ಹೇಳಿದರು.



ನಾಲ್ಕು ವರ್ಷಗಳ ನಂತರ, ನ್ಯಾಷನಲ್ ಸ್ಟಾಕ್ ಎಕ್ಸ್‌ಛೇಂಜ್ (ಎನ್‌ಎಸ್‌ಇ) ಮತ್ತು ಬಾಂಬೆ ಸ್ಟಾಕ್ ಎಕ್ಸ್‌ಛೇಂಜ್ (ಬಿಎಸ್‌ಇ) ಗಳಲ್ಲಿ ಒಂದು ವಿಭಾಗವಾಗಿರುವ ಭಾರತದ ಎಸ್‌ಎಸ್‌ಇ ಕ್ರಮವಾಗಿ 49 ಮತ್ತು 32 ಘಟಕಗಳನ್ನು ನೋಂದಾಯಿಸಿದೆ. '2024 ರ ಹಣಕಾಸು ವರ್ಷದ ಅಂತ್ಯದ ವೇಳೆಗೆ 25 ಲಾಭರಹಿತ ಲಾಭಗಳನ್ನು ಪಡೆಯಬಹುದು, ಸಾಮಾಜಿಕ ಸ್ಟಾಕ್ ಎಕ್ಸ್‌ಛೇಂಜ್ ಅನ್ನು ಯಶಸ್ವಿ ಪ್ರಯತ್ನ ಎಂದು ಕರೆಯುತ್ತದೆ' ಎಂದು ಆರಂಭದಲ್ಲಿ ಸಲಹಾ ಸಮಿತಿಯು ಹೇಳಿತು.

ಸಂಭಾವ್ಯ ಹೂಡಿಕೆದಾರರು ಮತ್ತು ಲಾಭರಹಿತ ಮತ್ತು ಸಾಮಾಜಿಕ ಉದ್ಯಮಗಳ ನಡುವೆ SSE ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಕುರಿತು ಸಮಾಜದಲ್ಲಿ ಹೆಚ್ಚು ಅರಿವಿಲ್ಲ, ಇದರ ಆರಂಭವು ನಿಧಾನಗತಿಯಲ್ಲಿ ಸಾಗುತ್ತಿದೆ. ಇದರ ಅಡಿಪಾಯವನ್ನು ಬಲಪಡಿಸುವುದು, ಮೂಲಭೂತ ಅಂಶಗಳನ್ನು ನಿರ್ಮಿಸುವುದು ಮತ್ತು ಕೆಲವು ಉತ್ಪನ್ನಗಳನ್ನು ಹೊರತರುವುದು ಉತ್ತಮ ಲಾಭರಹಿತಗಳನ್ನು ನೋಂದಾಯಿಸಲು ಮತ್ತು ಪಟ್ಟಿ ಮಾಡಲು ಸಹಾಯ ಮಾಡುತ್ತದೆ ಎಂದು ಉದ್ಯಮ ತಜ್ಞರು ನಂಬುತ್ತಾರೆ. ಇದು ಹೂಡಿಕೆದಾರರ ವಿಶ್ವಾಸವನ್ನು ಪಡೆಯುತ್ತದೆ, ವಿನಿಮಯ ಕೇಂದ್ರಗಳು ಮತ್ತು ಮಧ್ಯವರ್ತಿಗಳು ಈ ಹೊಸ ಪರಿಸರ ವ್ಯವಸ್ಥೆಯಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ಸ್ಪಷ್ಟಪಡಿಸಿಕೊಂಡ ನಂತರ ಮುಂದಿನ ಹಂತಕ್ಕೆ ಹೋಗಬಹುದಾಗಿದೆ.

ಇಲ್ಲಿ 95% ರಷ್ಟು ಸಾಮಾಜಿಕ ವಲಯದ ನಿಧಿಯನ್ನು ಸಾರ್ವಜನಿಕ ವಲಯವು ನಿರ್ವಹಿಸುತ್ತದೆ. ಹಣಕಾಸು ಮಾರುಕಟ್ಟೆಗಳನ್ನು ಬಳಸಿ

ಸಾಮಾಜಿಕ ಪರಿಣಾಮ ಯಶಸ್ವಿಯಾಗುವಂತೆ ಮಾಡುವುದು ಸಾಮಾಜಿಕ ಷೇರು ವಿನಿಮಯದ ಹಿಂದಿನ ಕಲ್ಪನೆಯಾಗಿದೆ. ಭಾರತದಲ್ಲಿ, ಸಾಮಾಜಿಕ ವಲಯ ಮತ್ತು ವ್ಯಕ್ತಿ -ನಿಗಮಗಳ ನಡುವೆ ಪ್ರಸ್ತುತ ಇರುವ ನಂಬಿಕೆ ಮತ್ತು ವಿಶ್ವಾಸಾರ್ಹತೆಯ ಕೊರತೆಯನ್ನು ಸರಿದೂಗಿಸಲು ಇದು ಸಹಾಯಕವಾಗಬಹುದು.

ಎಸ್‌ಎಸ್‌ಇ ಮತ್ತು ಡ್ರೈವಿಂಗ್ ಫೋರ್ಸ್‌ಗೆ ಸಂಬಂಧಿಸಿದ 'ಸೆಬಿ' ಸಲಹಾ ಸಮಿತಿಯ ಮುಖ್ಯಸ್ಥ ಆರ್. ಬಾಲಸುಬ್ರಮಣ್ಯಂ ಅವರು ಈ ಪರಿಕಲ್ಪನೆಯ ಹಿಂದಿರುವ ಶಕ್ತಿ. ಅವರು ವಿಶ್ವದಾದ್ಯಂತ ಎಸ್‌ಎಸ್‌ಇಗಳು ಏಕೆ ವಿಫಲವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ತಮ್ಮ ವೃತ್ತಿಜೀವನದ ಹಲವು ವರ್ಷಗಳನ್ನು ಕಳೆದಿದ್ದೇನೆ ಎನ್ನುತ್ತಾರೆ. ಆದರೆ ನಿಜ ಹೇಳಬೇಕೆಂದರೆ, ಭಾರತವು ಈ ಸವಾಲುಗಳನ್ನು ಎದುರಿಸಬಹುದು ಮತ್ತು ಇವುಗಳನ್ನು ನಿರಂತರ ಬೆಂಬತ್ತಿ ಕೆಲಸ ಮಾಡಲು ಬೇಕಾದ ಸಾಮರ್ಥ್ಯವನ್ನು ಅದು ಹೊಂದಿದೆ ಎಂದು ನಂಬುತ್ತಾರೆ.

ಭಾರತದ ಎಸ್‌ಎಸ್‌ಇ ನಲ್ಲಿ ವ್ಯಾಪಾರವನ್ನು ಸುಗಮಗೊಳಿಸುವ ಹಾಗೂ ಹೀಗೆ ಸಾಂಪ್ರದಾಯಿಕ ಸ್ಟಾಕ್ ಎಕ್ಸ್‌ಛೇಂಜ್‌ಗಳಂತೆಯೇ ಕಾರ್ಯನಿರ್ವಹಿಸುವ ಮಹತ್ವಾಕಾಂಕ್ಷೆಯ ಯೋಜನೆಯ SEBI ಯ ಕಾರ್ಯಕಾರಿ ವರದಿಯು ವಿವರಿಸುತ್ತದೆ.

ವ್ಯಾಪಾರಕ್ಕೆ ಹೋಗಲು ಬಹಳ ದೂರವಿದೆ, ಏಕೆಂದರೆ ಪರಿಸರ ವ್ಯವಸ್ಥೆಯು ಇದೀಗ ಪ್ರಬುದ್ಧವಾಗಿಲ್ಲ, ಅದಕ್ಕಾಗಿಯೇ ಪ್ರಸ್ತುತ, ಸಾಮಾಜಿಕ ಪ್ರಭಾವದ ಮೇಲೆ ಕೇಂದ್ರೀಕರಿಸುವುದು ಅರ್ಥಪೂರ್ಣವಾಗಿದೆ ಎಂದು ಎಸ್‌ಇಬಿಐ ನಂಬುತ್ತದೆ. ಟ್ರೇಡಿಂಗ್ ಆರಂಭಿಸಬೇಕಾದರೆ ನಾವು ಇನ್ನಷ್ಟು ಸಾಧನೆ ಮಾಡಬೇಕಾಗಿದೆ.ಯಾಕೆಂದರೆ ಟ್ರೇಡಿಂಗ್‌ಗೆ ಪೂರಕವಾದ ಪಾರಿಸಾರಿಕ ವ್ಯವಸ್ಥೆಯು ಇನ್ನೂ ಪೂರಕವಾಗಿ ಬೆಳೆದಿಲ್ಲ, ಆದ್ದರಿಂದ ಪ್ರಸ್ತುತ, ಸಾಮಾಜಿಕ ಪರಿಣಾಮದತ್ತ ಹೆಚ್ಚು ಗಮನ ಹರಿಸುವುದೇ ಉತ್ತಮ ಎಂದು ಸೆಬಿ ನಂಬುತ್ತದೆ.

ನಾವು ಹೇಗೆ ನಡೆಯಬೇಕೆಂದು ಕಲಿತ ನಂತರವೇ ನಾವು ಓಡಲು ಪ್ರಯತ್ನಿಸಬೇಕು, ಇದೀಗ ನಾವು ಹೇಗೆ ನಡೆಯಬೇಕೆಂದು ಕಲಿಯುತ್ತಿದ್ದೇವೆ.

## ಕೇಂದ್ರ ಸರ್ಕಾರದ ಸೂರ್ಯಘರ್ ಯೋಜನೆ

ಪ್ರಧಾನಮಂತ್ರಿಗಳ ಸೂರ್ಯಘರ್ ಯೋಜನೆ ಅಡಿಯಲ್ಲಿ ಮನೆಯ ಮೇಲ್ಛಾವಣಿಗಳಲ್ಲಿ ಸೌರಶಕ್ತಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಅನುಸರಿಸಬೇಕಾದ ಹಂತಗಳು:

**ಹಂತ - 1 : ಈ ಕೆಳಗಿನ ವಿಷಯಗಳಿಗೆ ಅನುಸಾರವಾಗಿ ವೆಬ್ ಸೈಟ್ ನಲ್ಲಿ ನೋಂದಾಯಿಸಿಕೊಳ್ಳಿ-**

1. ನಿಮ್ಮ ರಾಜ್ಯ ಮತ್ತು ವಿದ್ಯುತ್ ವಿತರಣಾ ಕಂಪನಿಯನ್ನು ಆಯ್ಕೆಮಾಡಿ.
2. ನಿಮ್ಮ ವಿದ್ಯುತ್ ಗ್ರಾಹಕ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಅನ್ನು ನಮೂದಿಸಿ.

**ಹಂತ - 2 :** 1. ಗ್ರಾಹಕ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿ.

2. ಅರ್ಜಿ ಫಾರಂನಲ್ಲಿ ಕೇಳಿರುವ ಮಾಹಿತಿಯ ಪ್ರಕಾರ ಮನೆಯ ಮೇಲ್ಛಾವಣಿಗೆ ಸೌರಶಕ್ತಿ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿ.

**ಹಂತ - 3 :** ಒಮ್ಮೆ ನೀವು ಸಲ್ಲಿಸಿರುವ ಅರ್ಜಿಗೆ ಕಾರ್ಯಸಾಧ್ಯತೆಯ ಅನುಮೋದನೆ ಸಿಕ್ಕಿದರೆ, ನಿಮ್ಮ ಭಾಗದಲ್ಲಿರುವ ಡಿಸ್ಕಾಂ (*DISCOM*) ನಲ್ಲಿ ನೋಂದಾಯಿಸಿಕೊಂಡಿರುವ ಯಾವುದೇ ಮಾರಾಟಗಾರರಿಂದ ಸೌರಶಕ್ತಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಿ.

**ಹಂತ - 4 :** ಸೌರಶಕ್ತಿ ವ್ಯವಸ್ಥೆಯನ್ನು ಅಳವಡಿಕೆ ಪೂರ್ಣಗೊಂಡ ನಂತರ, ಇದರ ವಿವರಗಳನ್ನು ಸಲ್ಲಿಸಿ. ಆ ನಂತರ ನೆಟ್‌ಮೀಟರ್ ಗಾಗಿ ಅರ್ಜಿ ಸಲ್ಲಿಸಬೇಕು.

**ಹಂತ -5 :** ನೆಟ್ ಮೀಟರ್ ಅನ್ನು ಅಳವಡಿಸಿದ ನಂತರ ಡೆಸ್ಕಾಂನಿಂದ ತಪಾಸಣೆ ನಡೆಸಿ ಸೌರಶಕ್ತಿಚಾಲಿತ ವ್ಯವಸ್ಥೆಯು ಕೆಲಸ ಆರಂಭಿಸಿರುವ ಕುರಿತು ಪ್ರಮಾಣ ಪತ್ರವನ್ನು ಪೋರ್ಟಲ್ ಮುಖಾಂತರ ರಚಿಸಲಾಗುತ್ತದೆ.

**ಹಂತ -6 :** ಒಮ್ಮೆ ನೀವು ಸೌರಶಕ್ತಿಚಾಲಿತ ವ್ಯವಸ್ಥೆಯು ಕೆಲಸ ಆರಂಭಿಸಿರುವ ಕುರಿತು ಪ್ರಮಾಣ ಪತ್ರವನ್ನು ಪಡೆದ ನಂತರ, ಪೋರ್ಟಲ್ ಮೂಲಕ ಬ್ಯಾಂಕ್ ಖಾತೆಯ ವಿವರಗಳು ಮತ್ತು ರದ್ದುಗೊಳಿಸಿರುವ ನಿಮ್ಮ ಒಂದು ಚೆಕ್ ಅನ್ನು ಸಲ್ಲಿಸಬೇಕು. ಆ ನಂತರ 30 ದಿನಗಳಲ್ಲಿ ನಿಮ್ಮ ಸಬ್ಸಿಡಿ ಹಣವು ನಿಮ್ಮ ಬ್ಯಾಂಕ್ ಖಾತೆಗೆ ಬರುತ್ತದೆ.

**ಸೂರ್ಯ ಘರ್ ಯೋಜನೆ ಎಂದರೆ...** ಮಾನ್ಯ ಪ್ರಧಾನಮಂತ್ರಿ ಸೂರ್ಯಘರ್ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ದೇಶದ ಒಂದು ಕೋಟಿ ಮನೆಗಳ ಮೇಲ್ಛಾವಣಿಗಳಿಗೆ ಸೌರ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಅವರ ವಿದ್ಯುತ್ ಬಿಲ್ ವೆಚ್ಚವನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ಹೊಂದಿದೆ.

**ಸೌರ ಮೇಲ್ಛಾವಣಿಯ ಫೋಟೋ ವೋಲ್ಟಾಯಿಕ್ (ಪಿವಿ) ಸಿಸ್ಟಮ್ ಅಥವಾ ಗ್ರಿಡ್ ಟೈ ಸಿಸ್ಟಮ್ ಎಂದರೆ...** ಗ್ರಿಡ್ ಅಥವಾ ಗ್ರಿಡ್-ಟೈ ಅಥವಾ ರೂಫ್ ಟಾಪ್ ಸೌರ ಫೋಟೋ ವೋಲ್ಟಾಯಿಕ್ (ಪಿವಿ) ವ್ಯವಸ್ಥೆಯು ಎರಡು ದಿಕ್ಕುಗಳ ಸೌರಶಕ್ತಿ ವ್ಯವಸ್ಥೆಯಾಗಿದ್ದು, ಇದು, ಸ್ಥಳೀಯ ಗ್ರಿಡ್‌ಗೆ ಸಂಪರ್ಕ ಹೊಂದಿರುವ/ಸಿಂಕ್ರೊನೈಸ್ ಮಾಡಲಾದ ಗ್ರಿಡ್‌ಅನ್ನು ಬಳಸುತ್ತದೆ. ಈ ರೂಫ್ ಟಾಪ್ ವ್ಯವಸ್ಥೆಯಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಗ್ರಿಡ್‌ಗೆ ರವಾನಿಸಬಹುದು.

# ಸಕ್ಕರೆಯ ನಾಡಿನಲ್ಲಿ ಸೌರಶಕ್ತಿಯ ರಾಯಭಾರಿ

ಸಕ್ಕರೆಯ ನಾಡು ಮಂಡ್ಯದಲ್ಲಿ ಬಿಸಿಲಿನ ಶಕ್ತಿಯನ್ನು ಮೊಗೆದುಕೊಂಡ ಒಂದು ಊರೇ ಇದೆ. ಅದು ಎ. ಹುಲ್ಲುಕೆರೆ ಎಂಬ ಹಳ್ಳಿ. ಈ ಊರಿನ ಬಹುತೇಕ ಮನೆಗಳಲ್ಲಿ ಸೌರಶಕ್ತಿ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಬಹುತೇಕ ಎಂದರೆ ಬರೋಬ್ಬರಿ 350 ಮನೆಗಳಲ್ಲಿ ಬಿಸಿಲಿನ ಕೊಯ್ಲು ನಡೆಯುತ್ತದೆ ಎಂದು ಅಚ್ಚರಿಯಾಗುತ್ತದೆಯೆ? ಸೌರ ಆಧರಿತ ಬಿಸಿನೀರಿನ ವ್ಯವಸ್ಥೆ, ದೀಪಗಳನ್ನು ಈ ಮನೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ಊರಿನ ದೇವಾಲಯ, ಬೀದಿ ದೀಪಗಳು, ಶಾಲೆಗೂ ಸಹ ಸೌರಚಾಲಿತ ವ್ಯವಸ್ಥೆ ಇದೆ. ಅಂದಹಾಗೆ ಈ ಊರು ಇರುವುದು ಕೊತ್ತತ್ತಿ ಹೋಬಳಿಯ ಬೇವಿನಹಳ್ಳಿ ಅಂಚೆ ವ್ಯಾಪ್ತಿಯಲ್ಲಿ.

ಆದರೆ ಈ ಊರಿನ ಎಚ್ . ಆರ್. ನಾರಾಯಣ ಸ್ವಾಮಿ ಅವರ ಬಗ್ಗೆ ವಿಶೇಷವಾಗಿ ಹೇಳಲೇಬೇಕು. ಸೌರಶಕ್ತಿ ಜೊತೆಗೆ ಅವರ ನಂಟು ಸುಮಾರು ಒಂದೂವರೆ ದಶಕಕ್ಕೂ ಹಳೆಯದು. 15 ವರ್ಷಗಳ ಹಿಂದೆ, ತಮ್ಮ ಮನೆಗೆ 4 ಲೈಟ್‌ಗಳನ್ನು ಅಳವಡಿಸಿಕೊಂಡಿದ್ದಾರೆ. ಬಾಡಿಗೆ ಮಳಿಗೆಯಲ್ಲಿರುವ ದಿನಸಿ ಅಂಗಡಿ ಹಾಗೂ ಬುಕ್ ಸ್ಟೋರ್‌ಗೆ ಆರು ಲೈಟ್‌ಗಳ ಸೌರಶಕ್ತಿಚಾಲಿತ ವ್ಯವಸ್ಥೆಯಿದೆ. ಅಂದರೆ, ಸೌರಶಕ್ತಿಯ ಸಾಮರ್ಥ್ಯವನ್ನು ಅವರು ಬಹಳ ಹಿಂದೆಯೇ ಅರಿತುಕೊಂಡವರು. ಹಾಗಾಗಿ, ತಮ್ಮ ದಿನಸಿ ಅಂಗಡಿಯ ವ್ಯಾಪಾರವನ್ನು ಇನ್ನಷ್ಟು ಆಯಾಮಗಳಲ್ಲಿ ವಿಸ್ತರಿಸಲು ಸೌರಶಕ್ತಿಯನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಅಂಗಡಿಯಲ್ಲಿ ಸೌರ ಶಕ್ತಿ ಆಧರಿತ ಝೆರಾಕ್ಸ್ ಯಂತ್ರವನ್ನು, ಫ್ರಿಡ್ಜ್ ಅನ್ನು ಅಳವಡಿಸಿಕೊಂಡು ವರ್ಷಗಳೇ ಕಳೆದಿವೆ. ಇಷ್ಟೆಲ್ಲ ವ್ಯವಸ್ಥೆ ಇರುವಾಗ ಒಂದು ಪಾನೀಪೂರಿ ತಯಾರಿಸುವ ಯಂತ್ರ ಖರೀದಿಸಬಹುದೇ ಎಂಬ ಆಲೋಚನೆ ಅವರದು. ಹೀಗೆ ಉದ್ಯಮವನ್ನು ವಿಸ್ತರಿಸುತ್ತಿರುವ ಅವರ ವಿಶ್ವಾಸದ ಮೂಲ ಸೌರಶಕ್ತಿಯ ಬಗೆಗಿನ ನಂಬಿಕೆ. ನಿರಂತರ ಉದ್ಯಮವನ್ನು ಮುಂದುವರೆಸಲು ಸೌರಶಕ್ತಿಯು ಹೇಗೆ ಆಸರೆಯಾಗಿದೆ, ನಂಬಿಕೆಯನ್ನು ಉಳಿಸಿಕೊಂಡಿದೆ ಎಂಬುದಕ್ಕೆ ನಾರಾಯಣ ಸ್ವಾಮಿ ಅವರ ಅಂಗಡಿಯು ಒಳ್ಳೆಯ ಉದಾಹರಣೆ.



**ದಿನದ 24 ಗಂಟೆಗಳ ಕಾಲವೂ ಸೌರಶಕ್ತಿ ಲಭ್ಯವಿರುವು ದರಿಂದ ವಿದ್ಯುತ್ತನ್ನು ಅವಲಂಬಿಸಬೇಕಾಗಿಲ್ಲ. ಇದರಿಂದ ವ್ಯಾಪಾರ ನಿರಂತರವಾಗಿ ನಡೆಯುತ್ತದೆ. ಸಮೀಪದಲ್ಲೇ ಶಾಲೆ ಇರುವುದರಿಂದ ಮಕ್ಕಳೇ ಅಂಗಡಿಯ ಗ್ರಾಹಕರು. ದಿನಸಿ ಅಂಗಡಿ, ಬುಕ್ ಸ್ಟೋರ್ ಒಟ್ಟಿಗೇ ಇರುವುದರಿಂದ ಒಂದಕ್ಕೊಂದು ಪೂರಕವಾಗಿ ಆದಾಯ ವೃದ್ಧಿಯಾಗಿದೆ.**

**–ಎಚ್ . ಆರ್. ನಾರಾಯಣ ಸ್ವಾಮಿ**

ಎಲ್ಲವೂ ಸುಲಭವಾಗಿಯೇ ಸಾಧ್ಯವಾಗಿಲ್ಲ. ಸುಮಾರು 90,000 ರೂ. ಮೌಲ್ಯದ ಫ್ರಿಡ್ಜ್ ಖರೀದಿಸಲು ಅವರಿಗೆ ಸಾಲದ ಆವಶ್ಯಕತೆ ಇತ್ತು. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಮೂಲಕ (ಎಸ್‌ಕೆಡಿಆರ್‌ಡಿಪಿ) 70,000 ರೂ. ಹಣವನ್ನು ಸಾಲದಿಂದ ಭರಿಸಿಕೊಂಡಿದ್ದು, ಪ್ರತಿ ತಿಂಗಳೂ ಕಂತುಗಳನ್ನು ಕಟ್ಟುವ ಮೂಲಕ ಸಾಲ ಭರ್ತಿ ಮಾಡುತ್ತಿದ್ದಾರೆ. ಹಳೆ ಸಾಲಗಳೂ ಇದ್ದರೂ, ಈಗ ಅವೆಲ್ಲ ಚುಕ್ತಾ ಆಗಿವೆ. ವ್ಯಾಪಾರಕ್ಕೆ ಬದ್ಧರಾಗಿ ದುಡಿಯುವವರು ನಾರಾಯಣ ಸ್ವಾಮಿ. ಅವರಿಗೆ ಐದು ವರ್ಷ ಆಗುವಷ್ಟರಲ್ಲಿ, ಪೋಲಿಯೋಗೆ ತುತ್ತಾಗಿ ವಿಶೇಷಚೇತನರಾಗಿ ಗುರುತಿಸಿಕೊಳ್ಳಬೇಕಾಯಿತು. ಅಣ್ಣನ ಕುಟುಂಬದ ಜೊತೆಗೆ ಇರುವ ಅವರು ಆತ್ಮವಿಶ್ವಾಸದಿಂದ ಬದುಕು ಸಾಗಿಸಲು ಸೌರಶಕ್ತಿ ಆಸರೆಯಾಗಿದೆ. ಆದ್ದರಿಂದ, ಸೌರಶಕ್ತಿ ಕುರಿತು ಕುತೂಹಲದಿಂದ ಪ್ರಶ್ನಿಸುವವರಿಗೆ ಅದರ ಸೌಲಭ್ಯ ಹಾಗೂ ಅನುಕೂಲಗಳನ್ನು ವಿವರಿಸುತ್ತಾರೆ. ಅವರನ್ನು ಸೌರರಾಯಭಾರಿ ಎಂದರೆ ಸರಿ.

# ಮನೆಯಲ್ಲಿ ಉದ್ಯಮ ಮನದಲ್ಲಿ ಸಂಭ್ರಮ

ರೊಟ್ಟಿ ಮತ್ತು ಹಪ್ಪಳ ತಯಾರಿಕೆಯಲ್ಲಿಯೇ ಜೀವನ ಆದಾಯ ಗಳಿಸುವ ಮೂಲಕ ಹೊಸ ಬದುಕನ್ನು ಕಟ್ಟಿಕೊಳ್ಳುವ ಕನಸು ಹೊತ್ತವರು ಜ್ಯೋತಿ ಕಮತಗಿ. ಅವರ ಕನಸಿಗೆ ಜೊತೆಯಾದವರು ಮಹಾಂತೇಶ್. ಒಬ್ಬರಿಗೊಬ್ಬರು ಆಸರೆಯಾಗಿ ಈ ಉದ್ಯಮವನ್ನು ಆರಂಭಿಸುವ ವೇಳೆಗೆ ಇದು ಇಷ್ಟೊಂದು ವಿಸ್ತಾರವಾಗಿ ಬೆಳೆಯಬಹುದು ಎಂಬ ಕಲ್ಪನೆ ಅವರಿಗಿರಲಿಲ್ಲ.

ಚೆನ್ನಾಗಿ ರೊಟ್ಟಿ ತಯಾರಿಸುವ ಜ್ಯೋತಿ ಅವರ ಬಳಿ ಅನೇಕರು ಬಂದು, ಒಂದಷ್ಟು ರೊಟ್ಟಿ ಮಾಡಿಕೊಡುವಂತೆ ಮನವಿ ಮಾಡುತ್ತಿದ್ದರು. ಅದಕ್ಕೊಂದಿಷ್ಟು ಹಣವನ್ನೂ ಕೊಟ್ಟು ಹೋಗುತ್ತಿದ್ದರು. ಹೀಗೆ ತನ್ನದೇ ಆದ ಸಂಪಾದನೆಯನ್ನು ಮಾಡಿಕೊಳ್ಳುತ್ತಿದ್ದರು. ಆದರೆ ರೊಟ್ಟಿಗಳನ್ನು ಕೇಳಿ ಬರುವ ಗ್ರಾಹಕರ ಸಂಖ್ಯೆ ದಿನೇದಿನೇ ಹೆಚ್ಚಾಯಿತು.



**ಈಗ ಎಷ್ಟು ಆರ್ಡರ್ ಬಂದರೂ ಯಾವಾಗ ಬೇಕಾದರೂ ರೊಟ್ಟಿ ಮತ್ತು ಹಪ್ಪಳಗಳನ್ನು ಮಾಡಿಕೊಡುತ್ತೇವೆ. ಗೃಹೋದ್ಯಮ ಚೆನ್ನಾಗಿ ನಡೆಯುತ್ತಿದೆ. ಅದಕ್ಕೆ ಸೌರಶಕ್ತಿಯೇ ಕಾರಣ. ಆದಾಯದಲ್ಲಿ ಹೆಚ್ಚಳ, ಕಡಿಮೆ ಶ್ರಮ, ಸಮಯದ ಉಳಿತಾಯ ಸಾಧ್ಯವಾಗಿದೆ.**

**–ಜ್ಯೋತಿ ಕಮತಗಿ, ಮುಮ್ಮಿಗಟ್ಟಿ, ಧಾರವಾಡ**

ಸಹಾಯಕ್ಕೆ ಒಂದಿಬ್ಬರು ಆಳುಗಳನ್ನು ನೇಮಿಸಿಕೊಳ್ಳೋಣ ಎಂದರೆ ಅವರಿಗೆ ವೇತನ ಕೊಡುವಷ್ಟು ಲಾಭ ಬರುತ್ತಿರಲಿಲ್ಲ. ರೊಟ್ಟಿ ತಯಾರಿಕೆಗೆ ಬೇಕಾದ ವಿದ್ಯುತ್ ಚಾಲಿತ ಯಂತ್ರಗಳನ್ನು ಅಳವಡಿಸಿಕೊಳ್ಳೋಣ ಎಂದು ಪ್ರಯತ್ನಿಸಿದರು. ಆದರೂ ವಿದ್ಯುತ್ ಪದೇ ಪದೇ ಕೈ ಕೊಡುತ್ತಿರುವಾಗ, ಬೇಡಿಕೆ ಸಲ್ಲಿಸಿದ ಗ್ರಾಹಕರಿಗೆ ಸಕಾಲಕ್ಕೆ ರೊಟ್ಟಿ ಕೊಡುವುದಾದರೂ ಹೇಗೆ?

ಇದೇ ಸಂದರ್ಭದಲ್ಲಿ ಅವರಿಗೆ ಸೌರಶಕ್ತಿಯ ಪರಿಚಯವಾಯಿತು. ಸ್ಥಳೀಯ ಮಹಿಳಾ ಸ್ವಸಹಾಯ ಗುಂಪಿನ ಮೂಲಕ, ಸೆಲ್ಕೋ ಸಂಸ್ಥೆಯು ಇಂತಹ ಉದ್ಯಮಗಳಿಗೆ ಅನುಕೂಲವಾಗುವಂತೆ ವಿನ್ಯಾಸ ಮಾಡಿಕೊಡುತ್ತಿದ್ದ ಉಪಕರಣಗಳ ಬಗ್ಗೆ ಕೇಳಿ ತಿಳಿದುಕೊಂಡರು. ಅಷ್ಟೇ ಅಲ್ಲ ರೊಟ್ಟಿ ಮತ್ತು ಹಪ್ಪಳ ತಯಾರಿಕೆಗೆ ಒದಗುವ ಎಲ್ಲ ಸೌರ ಆಧರಿತ ಉಪಕರಣಗಳನ್ನುಅಳವಡಿಸಿಕೊಂಡರು.

- ಈಗ ಗ್ರಾಹಕರ ನಿರೀಕ್ಷೆ ಹುಸಿಯಾಗುತ್ತಿಲ್ಲ. ಸಮಯಕ್ಕೆ ಸರಿಯಾಗಿ ರೊಟ್ಟಿ ಸಿದ್ಧವಾಗುತ್ತಿದೆ.
- ಉದ್ದು, ರಾಗಿ, ಅಕ್ಕಿಯ ಹಪ್ಪಳ, ಜೋಳ ಮತ್ತು ಸಜ್ಜೆಯ ರೊಟ್ಟಿಗಳನ್ನು ಮಾಡುತ್ತಿದ್ದಾರೆ.
- ಸೌರಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಮಾಡಿದ ಸಾಲವನ್ನುಯಶಸ್ವಿಯಾಗಿ ಮರುಪಾವತಿಸುತ್ತಿದ್ದಾರೆ.

# 'ಹಾ ! ನೀರು ನೀರು'

## ಕರ್ನಾಟಕದಲ್ಲಿ ಬರಗಾಲ

ಕರ್ನಾಟಕದಲ್ಲಿ ಭೀಕರವಾದ ಬರ ಪರಿಸ್ಥಿತಿಯಿದೆ. 236 ತಾಲೂಕುಗಳ ಪೈಕಿ 223ರಲ್ಲಿ ಬರ, ನೀರಿನ ಕೊರತೆ, ರೈತರ ಆತ್ಮಹತ್ಯೆಯಂಥ ವರದಿಗಳು ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಈ ಬಗ್ಗೆ ವೆಬ್ ಸೈಟ್: *https://sandrp.in* ವರದಿ ಪ್ರಕಟಿಸಿದ್ದು, ನಿರೀಕ್ಷಿಸದಂತೆ ಬೇಸಿಗೆಯು ಈ ಬಾರಿ ಬಹಳ ಕಷ್ಟಕರವಾಗಲಿದೆ.

ಇದರಲ್ಲಿ ಜಾಗತಿಕ ತಾಪಮಾನದ ವೈಪರೀತ್ಯ ಮತ್ತು 'ಎಲ್‌ನಿನೋ' ಎಂಬ ಚಂಡಮಾರುತದ ಪಾತ್ರವಿದೆ. ಸದ್ಯಕ್ಕೆ ಕರ್ನಾಟಕ ಸರ್ಕಾರವು ವಾಸ್ತವ ಸನ್ನಿವೇಶದ ಬಗ್ಗೆ ಎಚ್ಚೆತ್ತಿದ್ದು, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಕಳೆದ ವರ್ಷ ನೈರುತ್ಯ ಮುಂಗಾರು ಹಂಗಾಮಿನಲ್ಲೂ ಕರ್ನಾಟಕವು ಮಳೆ ಕೊರತೆಯನ್ನು ಎದುರಿಸಿತ್ತು.

ಬೆಂಗಳೂರು ಸೇರಿದಂತೆ ರಾಜ್ಯದ ಕೆಲವು ಭಾಗಗಳಲ್ಲಿ ಮಾರ್ಚ್-ಎಪ್ರಿಲ್‌ನಲ್ಲಿ ಸ್ವಲ್ಪ ಮಳೆ ಬೀಳಬಹುದು, ಅಂತಹ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ನೀರಿನ ಕೊರತೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇನ್ನು ಎಲ್‌ನಿನೊ ಚಂಡಮಾರುತವು 2024ರ ಜುಲೈ-ಆಗಸ್ಟ್ ಹೊತ್ತಿಗೆ 'ಲಾ ನಿನಾ'ಗೆ ದಾರಿ ಮಾಡಿಕೊಡಬಹುದು. ಇದರ ದೆಸೆಯಿಂದ ಮಳೆಯಾದೀತೇ ಎಂದು ಕಾದು ನೋಡಬೇಕಿದೆ. ಎಲ್ಲ ಮಾರುತಗಳೂ ಮಳೆಯನ್ನು ತರಲಾರವು ಎಂಬುದನ್ನೂ ಗಮನಿಸಬೇಕು.



ಕರ್ನಾಟಕದಲ್ಲಿ 2023ರ ಏಪ್ರಿಲ್ ಮತ್ತು 2024ರ ಜನವರಿ ಮಧ್ಯೆ 692 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಕಂದಾಯ ಇಲಾಖೆಯ ಅಂಕಿ-ಅಂಶಗಳು ನಿರಂತರ ಬರ ಪರಿಸ್ಥಿತಿಗಳ ಮೂಲಕ ಗ್ರಾಮೀಣ ಪ್ರದೇಶದ ಸಂಕಷ್ಟವನ್ನು ಎತ್ತಿ ತೋರಿಸುತ್ತವೆ. ಹಾವೇರಿ (84), ಬೆಳಗಾವಿ (75) ಮತ್ತು ಚಿಕ್ಕಮಗಳೂರು (60) ಈ ಜಿಲ್ಲೆಗಳಲ್ಲಿ ಅತಿ ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಯು ಪರಿಸ್ಥಿತಿಯ ತೀವ್ರತೆಯನ್ನು ಹೇಳುತ್ತವೆ. ಇತರ ರೈತರೂ ಎದುರಿಸುವ ಸಮಸ್ಯೆಗಳು ನೂರಾರು. ಅಂತಿಮವಾಗಿ ಎಲ್ಲ ಸಮಸ್ಯೆಗಳೂ ಆಹಾರ ಬೆಳೆಗಳ ಮೇಲೆ ಪರಿಣಾಮ ಬೀರುತ್ತವೆ.

ಕುಡಿಯುವ ನೀರಿನ ಕೊರತೆಯು ಈ ವರ್ಷ ಬೇಸಿಗೆಯಲ್ಲಿ ಹೆಚ್ಚು ತೀವ್ರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆ ಸೇರಿ ಕರ್ನಾಟಕದಾದ್ಯಂತ ಸುಮಾರು 7,082 ಗ್ರಾಮಗಳು, 1,193 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಲಿದೆ. ಕಂದಾಯ ಇಲಾಖೆ ವರದಿಯು ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನ ಹಳ್ಳಿಗಳನ್ನು (746), ಉತ್ತರಕನ್ನಡದಲ್ಲಿ ಹೆಚ್ಚಿನ ಸಂಖ್ಯೆಯ ವಾರ್ಡ್‌ಗಳನ್ನು ಗುರುತಿಸಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 174 ಗ್ರಾಮಗಳು, 120 ವಾರ್ಡ್‌ಗಳಲ್ಲಿ ನೀರಿನ ಕೊರತೆಯನ್ನು ತೋರಿಸಲಾಗಿದೆ.

ನದಿಗಳನ್ನಂತೂ ನಾವು ಎಷ್ಟು ಕೆಟ್ಟದಾಗಿ ಬಳಕೆ ಮಾಡುತ್ತೇವೆ! ಅಗೌರವದಿಂದ ಕಾಣುತ್ತೇವೆ. ನಗರವನ್ನು ಹಾದು ಹೋಗುವ ನದಿಗಳ ಪಾಡು ಬಹಳ ಕೆಟ್ಟದಾಗಿರುತ್ತವೆ. ಉದಾಹರಣೆಗೆ ಕಾವೇರಿ ನದಿಯ ಅತಿಯಾದ ಬಳಕೆ, ಅಸಮತೋಲನ ಬೆಳವಣಿಗೆಯಿಂದಾಗಿ ಬೆಂಗಳೂರು ಸಹ ನೀರಿನ ಕೊರತೆಯನ್ನು ಎದುರಿಸುತ್ತಿದೆ. ಸಿವಿಲ್ ಇಂಜಿನಿಯರ್ ರಾಜ್‌ಭಗತ್ ಅವರು ಭೌಗೋಳಿಕ ಅಂಶಗಳು ಇದಕ್ಕೆ ಕಾರಣ ಎಂದು ಹೇಳುತ್ತಾರೆ. ಅಂದರೆ ಜನಸಂಖ್ಯೆಯು ಒಂದೇ ಕಡೆ ಜಮಾಯಿಸುವುದು ಕೂಡ ನದಿಯ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿ ಮಾಡುತ್ತದೆ ಅಲ್ಲವೇ. ನದಿಯನ್ನು ಎಲ್ಲರೂ ಒಟ್ಟಾಗಿ ಉಳಿಸಿಕೊಳ್ಳಬೇಕು. ನೀರಿನ ಬಿಕ್ಕಟ್ಟನ್ನು ಸಾಮೂಹಿಕವಾಗಿ ನಿಭಾಯಿಸಲು ಸಂರಕ್ಷಣೆ ಪ್ರಯತ್ನಗಳು, ವೈವಿಧ್ಯಮಯ ಬೆಳವಣಿಗೆಗೆ ಸಲಹೆ ನೀಡುತ್ತಾರೆ.



# ಗ್ರಾಹಕ ಅಭಿಮತ



## ಸೌರಶಕ್ತಿಯಿಂದ ಬೇಡಿಕೆ ನಿರಂತರವಾಗಿದೆ...

ಸುಮಾರು 18 ಸಾವಿರ ರೂ. ಸಾಲ ತೆಗೆದು ಸೌರಶಕ್ತಿಚಾಲಿತ ವ್ಯವಸ್ಥೆಯನ್ನು ಅಳವಡಿಸಿಕೊಂಡೆವು. ಇದರಿಂದ ಟೈಲರಿಂಗ್ ಕೆಲಸವು ಸರಾಗವಾಯಿತು. ಸಕಾಲದಲ್ಲಿ ಗ್ರಾಹಕರ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುವುದರಿಂದ ಬೇಡಿಕೆ ನಿರಂತರವಾಗಿದೆ. ಹಾಗಾಗಿ, ಕೇವಲ ಎರಡು ವರ್ಷದಲ್ಲಿ ಸಾಲ ತೀರಿಸಿಕೊಂಡೆವು. ಇದಕ್ಕೆ ಕಾರಣವಾದ ಎಸ್‌ಕೆಆರ್‌ಡಿಪಿ ಮತ್ತು ಸೆಲ್ಕೋಗೆ ಋಣಿಯಾಗಿರುವೆ.

**– ನಂದಿನಿ,** ಅರಸೀಕೆರೆ, ಹಾಸನ ಜಿಲ್ಲೆ



## ಸಮಾಜದ ಋಣ ತೀರಿಸಲು ಯತ್ನಿಸುತ್ತೇನೆ !

ಬಡತನದಿಂದ ಕಾರಣದಿಂದ ವಿದ್ಯಾಭ್ಯಾಸ ಮುಂದುರಿಸಲು ಸಾಧ್ಯವಾಗದೆ ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದ ನನಗೆ, ಇಂದು ಸ್ವಾವಲಂಬನೆಯ ಬದುಕನ್ನು ನಡೆಸಲು ಸೆಲ್ಕೋ ಸಂಸ್ಥೆ ನೇರವಾಗಿ ಕಾರಣವಾಗಿದೆ. ಸೆಲ್ಕೋದ ಸಹಾಯದಿಂದ ಜೀವನೋಪಾಯಕ್ಕಾಗಿ ಒಂದು ಅಂಗಡಿಯನ್ನು ನಡೆಸಲು ಸಾಧ್ಯವಾಗಿದೆ. ನನ್ನಂತಹ ಇತರರಿಗೆ ಸ್ವ ಉದ್ಯೋಗಗದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗುವ ಮೂಲಕ ಸೆಲ್ಕೋ ಮತ್ತು ಸಮಾಜದ ಋಣ ತೀರಿಸಲು ಯತ್ನಿಸುತ್ತೇನೆ.

**– ಸುನೀತಾ ಕೆ.,** ಮೋಕಾಗೋನಾಳ್, ಬಳ್ಳಾರಿ ಜಿಲ್ಲೆ



## ಹೆಚ್ಚುವರಿ ಆದಾಯ ಗಳಿಸಲು ಸೌರಶಕ್ತಿ ನೆರವಾಯಿತು...

ಸೌರಶಕ್ತಿಚಾಲಿತ ನೆರಳಚ್ಚು ಯಂತ್ರವನ್ನು ಅಳವಡಿಸಿಕೊಂಡಿದ್ದರಿಂದ ನನ್ನ ಚಿಕ್ಕ ಮಕ್ಕಳ ಜವಾಬ್ದಾರಿ ನಿಭಾಯಿಸಲು ಬೇಕಾಗಿದ್ದ ಹೆಚ್ಚುವರಿ ಆದಾಯ ಗಳಿಸಲು ಸಾಧ್ಯವಾಯಿತು. ಕರೆಂಟ್ ಇಲ್ಲದಿದ್ದರೆ ದೂರದಿಂದಲೂ ತುಂಬಾ ಜನ ಬರುತ್ತಾರೆ. ಇದರಿಂದ ಸಾರ್ವಜನಿಕರಿಗೂ ಅನುಕೂಲವಾಗಿದೆ. ಒಂದೇ ವರ್ಷಕ್ಕೆ ನಾನು ಹಾಕಿದ ಹಣ ವಾಪಸ್ ಬಂದಿದೆ. ಧರ್ಮಸ್ಥಳ ಸಂಘದ ಮೂಲಕ ನಾನು ಸೆಲ್ಕೋ ಸಂಪರ್ಕಕ್ಕೆ ಬರದಿದ್ದರೆ ಇವತ್ತು ನಾನಿರುವ ಉತ್ತಮ ಸ್ಥಿತಿ ನನಗೆ ಸಾಧ್ಯವಾಗುತ್ತಿರಲಿಲ್ಲ. ನನ್ನ ಸಹಾಯಕ್ಕೆ ಬಂದ ಎಲ್ಲರಿಗೂ ಧನ್ಯವಾದಗಳು.

**–ಸರೋಜಿನಿ ಮುಸಳೇಕರ್,** ಧಾರವಾಡ

## ಯಾವಾಗ ಬೇಕಾದರೂ ಪ್ರಿಂಟ್ ತೆಗೆದುಕೊಡುತ್ತೇವೆ !



ಕೃಷಿ ಕೂಲಿ ಕೆಲಸ ಮಾಡಿಕೊಂಡಿದ್ದ ನಮಗೆ ಸೋಲಾರ್ ರೊಟ್ಟಿ ಮೆಷಿನ್ ತಂದ ನಂತರ ತುಂಬಾ ಅನುಕೂಲವಾಗಿದೆ. ತಿಂಗಳಿಗೆ ಸುಮಾರು 20 ಸಾವಿರ ರೂ. ಕಂತು ಕಟ್ಟಿಕೊಂಡು ಜೀವನ ನಡೆಸುವಷ್ಟು ವ್ಯಾಪಾರ ನಡೆಯುತ್ತದೆ. ನಾವು ನೆಮ್ಮದಿಯಾಗಿದ್ದೇವೆ. ಇದಕ್ಕೆ ಸಹಾಯ ಮಾಡಿದ ಧರ್ಮಸ್ಥಳ ಸಂಘ ಮತ್ತು ಸೆಲ್ಕೋದವರಿಗೆ ಧನ್ಯವಾದಗಳು.

**– ರೇಖಾ ಪೂಜಾರಿ,** ಹುಬ್ಬಳ್ಳಿ, ಧಾರವಾಡ ಜಿಲ್ಲೆ

# ಬಿಹಾರದಲ್ಲಿ ಸೆಲ್ಕೊದ ಹೊಸ ಒಡಂಬಡಿಕೆ



ವಿನಾಯಕ ಜಕ್ಕೊಳ್ಳಿ
ಏರಿಯಾ ಮೆನೇಜರ್, ಆಪರೇಶನ್ಸ್

JEEVIKA ಎಂಬುದು ಬಡತನ ನಿರ್ಮೂಲನೆಗಾಗಿ ಬಿಹಾರ ಸರ್ಕಾರದ ಒಂದು ಉಪಕ್ರಮ. ಬಿಹಾರ ಸರ್ಕಾರ, ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾದ ಬಿಹಾರ್ ರೂರಲ್ ಲೈವ್ಲಿಹುಡ್ ಪ್ರಮೋಷನ್ ಸೊಸೈಟಿ (BRLPS) ಮೂಲಕ, ವಿಶ್ವ ಬ್ಯಾಂಕ್ ನೆರವಿನ ಬಿಹಾರ ಗ್ರಾಮೀಣ ಜೀವನೋಪಾಯ ಯೋಜನೆ (BRLP) ಯನ್ನು ಸ್ಥಳೀಯವಾಗಿ ಜೀವಿಕಾ ಎಂದು ಕರೆಯಲಾಗುತ್ತದೆ. ಗ್ರಾಮೀಣ ಬಡವರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ. ತರುವಾಯ, ಬಿಹಾರ್ ಕೋಸಿ ಪ್ರವಾಹ ಚೇತರಿಕೆ ಯೋಜನೆಯ (BKFRP) ಜೀವನೋಪಾಯಗಳ ಮರುಸ್ಥಾಪನೆ ಮತ್ತು ವರ್ಧನೆಯ ಘಟಕವನ್ನು ಸಹ ಜೀವಿಕಾದೊಂದಿಗೆ ಜೋಡಿಸಲಾಗಿದೆ.

NRLM ನ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಬಡವರ ಸಂಸ್ಥೆಗಳನ್ನು ನಿರ್ಮಿಸುವುದು, ಬೆಂಬಲಿಸುವುದು ಮತ್ತು ಅವರ ಜೀವನೋಪಾಯವನ್ನು ಹೆಚ್ಚಿಸುವ ಮೂಲಕ ಬಡತನ ನಿರ್ಮೂಲನೆಗೆ ಕಾರ್ಯ ರೂಪಿಸುವುದು ಜೀವಿಕಾದ ಉದ್ದೇಶ.

**-ಬಿಹಾರದ ಗ್ರಾಮೀಣ ಬಡವರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣವನ್ನು ಹೆಚ್ಚಿಸುವುದು.**

**-ಸಾರ್ವಜನಿಕ ಮತ್ತು ಖಾಸಗಿ ವಲಯದ ಏಜೆನ್ಸಿಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸೇವೆಗಳು, ಸಾಲ ಮತ್ತು ಸ್ವತ್ತುಗಳನ್ನು ಪ್ರವೇಶಿಸಲು ಮತ್ತು ಉತ್ತಮ ಮಾತುಕತೆ ನಡೆಸಲು ಗ್ರಾಮೀಣ ಬಡವರು ಮತ್ತು ಉತ್ಪಾದಕರ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು.**

**-ಸಾರ್ವಜನಿಕ ಮತ್ತು ಖಾಸಗಿ ಸೇವಾ ಪೂರೈಕೆದಾರರ ಸಾಮರ್ಥ್ಯ ನಿರ್ಮಾಣದಲ್ಲಿ ಹೂಡಿಕೆ ಮಾಡುವುದು.**

**-ಕಿರುಬಂಡವಾಳ ಮತ್ತು ಕೃಷಿ ಉದ್ಯಮ ವಲಯಗಳ ಅಭಿವೃದ್ಧಿಯನ್ನು ಉತ್ತೇಜಿಸುವುದು.**

ಜೀವಿಕಾ ಸುಮಾರು 34,740 ಬಿಹಾರದ ಹಳ್ಳಿಗಳಲ್ಲಿ ಕೆಲಸಮಾಡುತ್ತಿದ್ದು, ಸುಮಾರು 11 ಲಕ್ಷ ಸ್ವಸಹಾಯ ಗುಂಪುಗಳನ್ನು ಹೊಂದಿದೆ. ಕರ್ನಾಟಕದ ಎಸ್‌ಕೆಆರ್‌ಡಿಪಿ ಮಾದರಿಯಲ್ಲಿಯೇ ಈ ಗುಂಪುಗಳು ಕಾರ್ಯ ನಿರ್ವಹಿಸುತ್ತಿವೆ.

ಸೆಲ್ಕೋದ ದೃಷ್ಟಿಯಲ್ಲಿ ನೋಡುವಾಗ ಬಿಹಾರ ಜೀವಿಕಾ ಸಂಸ್ಥೆಯ ಸಹಯೋಗ ನಮ್ಮ ಮಿಶನ್ ಮತ್ತು ಸೌರ ಆಧಾರಿತ ಜೀವನೋಪಾಯ ವ್ಯವಸ್ಥೆಗಳನ್ನು ಅರ್ಹರಿಗೆ ತಲುಪಿಸಲು ಒಂದು ದೊಡ್ಡ ಸೇತು ಇದು ಎನ್ನಬಹುದು.

## J-WiRES

ಜೀವಿಕಾ ಸಂಸ್ಥೆಯು ಮಹಿಳೆಯರಿಂದ ನಿರ್ವಹಿಸಲ್ಪಡುವ ಸಂಸ್ಥೆ, ಇದು ಸೌರ ಉದ್ಯಮಿಗಳನ್ನ ಮತ್ತು ಸೌರ ವ್ಯವಸ್ಥೆಗಳನ್ನ ಬಿಹಾರಾದ್ಯಂತ ತಲುಪಿಸುವ ಉದ್ದೇಶ ಹೊಂದಿದೆ. 2020ಜನವರಿಯಲ್ಲಿ ದೋಭಿ, ಗಯಾ, ಬಿಹಾರದಲ್ಲಿ ಇದು ಕಾರ್ಯಾರಂಭ ಮಾಡಿದೆ. ವಿದ್ಯುತ್, ಎಲೆಕ್ಟ್ರಾನಿಕ್ಸ್ ಮತ್ತು ಸೌರ ಉತ್ಪನ್ನ ಮತ್ತು ಯೋಜನೆಗಳಲ್ಲಿ ವ್ಯವಹರಿಸುತ್ತಿರುವ ತಯಾರಕರು, ಅಸೆಂಬ್ಲರ್, ವ್ಯಾಪಾರಿ ಮತ್ತು ಸಿಸ್ಟಮ್ ಇಂಟಿಗ್ರೇಟರ್ ಕಂಪನಿ *J-WiRES* ನ ಗುರಿ ಬಿಹಾರದಲ್ಲಿ ಸೌರ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವುದು ಮತ್ತು ಸಮುದಾಯದ ಮಹಿಳೆಯರಿಗೆ *(SHG Didis)* ತಮ್ಮ ಸ್ವಂತ ಸ್ಥಳದಲ್ಲಿ ವೈಯಕ್ತಿಕ ಎಸ್-ಮಾರ್ಟ್ (ಸೋಲಾರ್ ಅಂಗಡಿ) ಆರಂಭಿಸಲು ಅವಕಾಶವನ್ನು ಒದಗಿಸುವುದು.

ಕಡಿಮೆ ಖರ್ಚಿನಲ್ಲಿ ಪರಿಣಾಮಕಾರಿ ಪರಿಹಾರಗಳು ಮತ್ತು ಖಚಿತವಾದ ಸೇವೆಯನ್ನು ಒದಗಿಸಲು ಸರ್ಕಾರಿ ಮತ್ತು ಖಾಸಗಿ ಪಾಲುದಾರರಿಂದ ಸೌರ ಯೋಜನೆ ರೂಪಿಸುವುದು, ಸಂಶೋಧನಾ ಯೋಜನೆ ಮತ್ತು ಶಕ್ತಿಯ ಅಗತ್ಯ ಮೌಲ್ಯಮಾಪನ ಈಕ್ಕ ಮತ್ತು ಸೌರ ತಂತ್ರಜ್ಞರ ಹಂತದವರೆಗೆ ಕೆಲಸ ಮಾಡುವುದು. ಅಂದರೆ ಸೌರ ಮಾಹಿತಿ ನೀಡಿ ಪೂರ್ವ ತರಬೇತಿಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ.

ಈಗಾಗಲೇ 5 ಜಿಲ್ಲೆಗಳಲ್ಲಿ 341 ಸೋಲಾರ್ ಅಂಗಡಿಗಳನ್ನು ಹೊಂದಿದೆ. (ಗಯಾ ನಾವಡ, ಔರಂಗಾಬಾದ್, ಡಬ್ಲ್ಯೂ ಚಂಪಾರಣ್ ಮತ್ತು ಭೋಜಪುರ್)

ಬಿಹಾರದ 57 ಬ್ಲಾಕ್‌ಗಳು, J-WiRES ಮೂಲಕ ಸೌರ, ವಿದ್ಯುತ್ ಮತ್ತು ಇಲೆಕ್ಟ್ರಾನಿಕ್ ಉತ್ಪನ್ನಗಳ ಜೊತೆಗೆ ಇ-ಸೇವೆಗಳನ್ನು (ಏರ್‌ಟೆಲ್ ಪಾವತಿ ಬ್ಯಾಂಕ್ CSP) ಪೂರೈಸುತ್ತಿದೆ.

## ನೋಮಿ ನೆಟ್‌ವರ್ಕ್

ಅಮೆರಿಕ ಮೂಲದ *Nomi Network* ಸಂಸ್ಥೆ ದಮನಿತ ಮಹಿಳೆಯರಿಗಾಗಿ ದುಡಿಯುತ್ತಿದೆ. ಮಾನವ ಕಳ್ಳ ಸಾಗಾಣಿಕೆಗೆ ಸಿಲುಕಿದವರ ರಕ್ಷಣೆ ಮತ್ತು ಅವರಿಗೆ ಜೀವನೋಪಾಯ ಕಲ್ಪಿಸುವ ಕಾರ್ಯ ಮಾಡುತ್ತಿದೆ. ಕಾಂಬೋಡಿಯಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಈ ಸಂಸ್ಥೆ ಕಾರ್ಯ ನಿರ್ವಹಿಸಿತ್ತಿದೆ. ಭಾರತದಲ್ಲಿಯೂ ಕೂಡ ಕೆಲವು ರಾಜ್ಯಗಳಲ್ಲಿ ಮಹಿಳೆಯರಿಗೆ ಜೀವನ ಕೌಶಲ ತರಬೇತಿ ಕೊಡುತ್ತಿದೆ. ಸೆಲ್ಕೊದ ಸಂಪರ್ಕದ ನಂತರ ಬಿಹಾರದಲ್ಲಿ ಹೊಸ ಯೋಜನೆ ರೂಪಿಸಿದ್ದು ಜೀವಿಕಾದ ಆಯ್ದ ಗುಂಪುಗಳಿಗೆ ತರಬೇತಿ ಮತ್ತು ಸೌರ ಆಧಾರಿತ ಜೀವನೋಪಾಯ ವ್ಯವಸ್ಥೆಗಳಿಗೆ ಸಹಾಯ ಮಾಡುವ ಕುರಿತು ಒಪ್ಪಂದಕ್ಕೆ ಮುಂದಾಗಿದೆ. ಇದೀಗ ಆ ನಿಟ್ಟಿನಲ್ಲಿ *Jeevika, BVT* ಮತ್ತು ಸೆಲ್ಕೊದ ಕೈ ಜೋಡಿಸಲು ಮುಂದಾಗಿವೆ.

# ಹಠನತ್ತ ಬಾಗಿದ ಭಾಸ್ಕರ

## ಕಾರಿಂಜ ದೇವಸ್ಥಾನದಲ್ಲಿ ಸೋಲಾರ್ ಅಳವಡಿಕೆ

ಮಂಗಳೂರಿನಿಂದ 35 ಕಿಮೀ ಮತ್ತು ಬಂಟ್ವಾಳದಿಂದ 14 ಕಿಮೀ ದೂರದಲ್ಲಿರುವ ಕಾರಿಂಜೇಶ್ವರ ದೇವಸ್ಥಾನವು ಬೆಟ್ಟದ ತುದಿಯಲ್ಲಿರುವುದರಿಂದ ಇಲ್ಲಿನ ನಿಸರ್ಗ ಸೌಂದರ್ಯ ರಮಣೀಯ. ಬೆಟ್ಟದ ತುದಿಯಲ್ಲಿ ಒಂದು ಶಿವಾಲಯವಿದೆ. ಇನ್ನೊಂದು ಶಿವನ ಪತ್ನಿ ಪಾರ್ವತಿ ದೇವಿಗೆ ಗುಡಿ ಹಾಗೂ ಕಾರಿಂಜೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಗಣೇಶ ದೇವರಿಗೊಂದು ದೇವಳವಿದೆ.

ತ್ರೇತಾಯುಗದಲ್ಲಿ ರಾಮ ಮತ್ತು ಲಕ್ಷ್ಮಣರು ಈ ದೇವಾಲಯಕ್ಕೆ ಜೊತೆಯಾಗಿ ಹೋಗಿದ್ದರು ಎಂದು ಪುರಾಣಗಳು ಹೇಳುತ್ತವೆ. ಇಲ್ಲಿ ಮಧ್ಯಾಹ್ನದ ಪೂಜೆಯ ಸಂದರ್ಭದಲ್ಲಿ ಭಗವಾನ್ ಶ್ರೀರಾಮಚಂದ್ರನೇ ಅನ್ನವನ್ನು ಬೇಯಿಸಿ ಶಿವನಿಗೆ ಬಡಿಸಿದನೆಂಬುದು ಪ್ರತೀತಿ. ನೈವೇದ್ಯದ ನಂತರ ಭಗವಾನ್ ರಾಮನು ಕೋತಿಗಳಿಗೆ ಅಕ್ಕಿಯನ್ನು ಹಾಕಿದ್ದರಿಂದ, ಈಗಲೂ ಈ ಬೆಟ್ಟದಲ್ಲಿ ಕೋತಿಗಳ ಸಂಖ್ಯೆ ಜಾಸ್ತಿ. ಮಧ್ಯಾಹ್ನ ಈಗಲೂ ಕೋತಿಗಳಿಗೆ ಅಕ್ಕಿ ಹಾಕುವ ಪರಿಪಾಠ ಇದೆ.

ಕೃತಯುಗದಲ್ಲಿ ಈ ದೇವಾಲಯವನ್ನು ರೌದ್ರ ಗಿರಿ ಎಂದು ಕರೆಯಲಾಗುತ್ತಿತ್ತು. ದ್ವಾಪರ ಯುಗದಲ್ಲಿ ಇದನ್ನು ಭೀಮ ಶೈಲ ಎಂದು ಕರೆಯಲಾಯಿತು. ತ್ರೇತಾಯುಗದಲ್ಲಿ ಇದನ್ನು ಗಜೇಂದ್ರ ಗಿರಿ ಎಂದು ಕರೆಯಲಾಗುತ್ತಿತ್ತು ಮತ್ತು ಕಲಿಯುಗದಲ್ಲಿ ಇದನ್ನು ಕಾರಿಂಜ ಎಂದು ಕರೆಯಲಾಗುತ್ತಿದೆ ಎಂದು ಇಲ್ಲಿನ ಐತಿಹ್ಯಗಳು ವಿವರಿಸುತ್ತವೆ.



ಭೀಮನು ತನ್ನ ಗದೆಯನ್ನು ನೆಲಕ್ಕೆ ಎಸೆದಾಗ ಕೊಳವೊಂದು ನಿರ್ಮಾಣವಾಯಿತಂತೆ. ಆ ಕೊಳವನ್ನು ಗದಾ ತೀರ್ಥ ಎಂದು ಕರೆಯಲಾಗುತ್ತದೆ. ಒಂದು ಕೊಳದ ಒಳಗೆ ಮತ್ತೊಂದು ಕೊಳವಿದ್ದು, ಅದನ್ನು ಹಂಡಿ ಕೆರೆ ಎಂದು ಕರೆಯುತ್ತಾರೆ.

ಅಮಾವಾಸ್ಯೆಯಂದು ದೇವಾಲಯದಲ್ಲಿ ವಿಶೇಷ ತೀರ್ಥಸ್ನಾನ ನಡೆಯಲಿದೆ. ಪ್ರತಿ ಸೋಮವಾರ ಮತ್ತು ಶುಕ್ರವಾರ ವಿಶೇಷ ಪೂಜೆ ಮತ್ತು ಸೇವೆಗಳು ನಡೆಯುತ್ತವೆ. ಮಹಾ ಶಿವರಾತ್ರಿ ಮತ್ತು ಪ್ರದೋಷ ದಿನಗಳಲ್ಲಿ ಪರಮೇಶ್ವರನ ಸನ್ನಿಧಿಯಲ್ಲಿ ರಾತ್ರಿ ಅಭಿಷೇಕ ಸೇವೆಗಳು ನಡೆಯುತ್ತವೆ. ಈ ಒಂದು ದಿನ ಸಂಜೆ ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ವಿದ್ಯುತ್ ಕಡಿತದಿಂದಾಗಿ ಸುತ್ತಲೂ ಕತ್ತಲು ತುಂಬಿತ್ತು. ಸಿಬ್ಬಂದಿಯೊಡನೆ ಮಾತನಾಡಿದಾಗ ಈ ವಿದ್ಯುತ್ ಕಡಿತ ಮಾಮೂಲು ಎಂಬ ಉತ್ತರ ಬಂದು.

ಇಷ್ಟೊಂದು ಭಕ್ತರು ಬರುವ ಈ ಶಿವಸಾನ್ನಿಧ್ಯಕ್ಕೆ ಸೋಲಾರ್ ಅಳವಡಿಸಿದರೆ ಹೇಗೆ ಎಂಬ ಯೋಚನೆ ಬಂದದ್ದೆ ಪುತ್ತೂರು ಘಟಕದ ಸೆಲ್ಕೋ ಸಿಬ್ಬಂದಿ ಕಾರ್ಯಪ್ರವೃತ್ತರಾದರು.

ಕರ್ನಾಟಕ ಬ್ಯಾಂಕ್ ನ ಮುಖ್ಯ ಶಾಖೆಯ ಅಧಿಕಾರಿಯೊಬ್ಬರು ಈ ದೇವಸ್ಥಾನಕ್ಕೆ ಭೇಟಿ ಕೊಟ್ಟು ಬೆಳಕಿನ ವ್ಯವಸ್ಥೆಗಾಗಿ ಸೋಲಾರ್‌ಅನ್ನು ಅಳವಡಿಸಲು ಬೇಕಾಗುವ ಹಣದ ವ್ಯವಸ್ಥೆಯನ್ನು ಮಾಡುವುದಾಗಿ ಭರವಸೆ ನೀಡಿದರು . ಅನಂತರ ಸೆಲ್ಕೋ ಸಂಸ್ಥೆಯ ಉನ್ನತ ಅಧಿಕಾರಿಗಳು ಭೈಟಿ ನೀಡಿ ಸೋಲಾರ್ ಅಳವಡಿಸುವ ಕಾರ್ಯ ಮುಂದುವರೆಸಿದರು.

ಈಗ ಈ ಶಿವಸಾನ್ನಿಧ್ಯಕ್ಕೆ ಹೋಗಿ ಬರಲು ಬೆಳಕಿನ ವ್ಯವಸ್ಥೆ ಇದೆ. ಸೌರ ಆಧರಿತ ದಾರಿದೀಪಗಳು, ದೇವಳದ ಆವರಣದಲ್ಲಿ ದೀಪಗಳು ಬೆಳಗುತ್ತಿವೆ. ದೇವಸ್ಥಾನದ ಆಸುಪಾಸಿನ ನಿರ್ಜನ ಪ್ರದೇಶದಲ್ಲಿ ದುಷ್ಕರ್ಮಿಗಳು ಬರುವುದು ಈಗ ಸಾಧ್ಯವಿಲ್ಲ, ಬೆಳಕಿನ ವ್ಯಾಪ್ತಿ ಅಲ್ಲಿನ ಭಕ್ತರ ಮನಸ್ಸಿನಲ್ಲಿ ಧೈರ್ಯ ಮೂಡಿಸಿದೆ. ದೇವಸ್ಥಾನಕ್ಕೆ ಬರುವ ಭಕ್ತರು ಸೌರಶಕ್ತಿಯ ಸಾಮರ್ಥ್ಯದ ಬಗ್ಗೆ ಕೇಳಿ ತಿಳಿದುಕೊಳ್ಳುತ್ತಿರುವುದು ಇನ್ನೊಂದು ಉತ್ತಮ ವಿಷಯ.

# ಡಿಯರ್ ದುಬೈ
## ಹೇಗೆ ಹೇಳಲಿ ಬೈ ಬೈ



ಜಗದಗಲ

ಜಗದೀಶ ಪೈ ಎ.

ದೇಶ ಸುತ್ತಿ ನೋಡು ಕೋಶ ಓದಿ ನೋಡು ಎಂಬುದು ಒಂದು ಜನಪ್ರಿಯವಾದ ಗಾದೆಮಾತು. ಮನುಷ್ಯನಿಗೆ ಲೋಕಜ್ಞಾನ ಎಂಬುವುದು ಬಹಳ ಮುಖ್ಯ ಎಂಬುದನ್ನು ಈ ಗಾದೆ ಮಾತು ತಿಳಿಸುತ್ತದೆ. ದೇಶವನ್ನು ಸುತ್ತುತ್ತ ಹೋದಂತೆ ನಮಗೆ ಅಲ್ಲಿನ ಜನರ ಸಂಸ್ಕೃತಿ, ಭಾಷೆ, ಆಚಾರ ವಿಚಾರ, ಪದ್ಧತಿಗಳು, ಆಚರಣೆಗಳು, ನಂಬಿಕೆಗಳು ಮುಂತಾದವುಗಳ ಅರಿವು ಉಂಟಾಗುತ್ತದೆ. ದೇಶ ಸುತ್ತುವುದು ಸುಲಭದ ಕೆಲಸವಲ್ಲ, ಅದಕ್ಕೆ ಸಮಯ, ತಾಳ್ಮೆ, ಗುರಿ, ಕೈಯಲ್ಲಿ ಹಣ ಹಾಗೂ ಸಂವಹನಕ್ಕಾಗಿ ಅಗತ್ಯ ಭಾಷೆಗಳ ಅರಿವು ಇರಬೇಕಾಗುತ್ತದೆ. ದೇಶ ಸುತ್ತಿ ನೋಡಿದಾಗ ಅದರ ಅನುಭವಗಳು ದೊಡ್ಡದಾಗಿರುತ್ತದೆ . ಇದು ಕೂಡ ಒಂದು ಬಗೆಯ ಜ್ಞಾನಾರ್ಜನೆಯಾಗಿದೆ. ನಾನು ಇಲ್ಲಿ ಗಾದೆಗಳ ಬಗ್ಗೆ ಲೇಖನ ಬರೆಯುತ್ತಿದ್ದೇನೆ ಎಂದು ಓದುಗರು ದಯವಿಟ್ಟು ಭಾವಿಸಬೇಡಿ! ಫೆಬ್ರವರಿ 17 ರಿಂದ 22ರ ವರೆಗೆ ಕೊಲ್ಲಿ ದೇಶವಾದ ಯುಎಇ ಅಥವಾ ಯುನೈಟೆಡ್ ಅರಬ್ ಎಮಿರೈಟ್ಸ್ ದೇಶಗಳಾದ ದುಬೈ ಮತ್ತು ಅಬುಧಾಬಿಗೆ ಭೇಟಿ ಕೊಟ್ಟ ಬಗ್ಗೆ ಒಂದು ಕಿರು ಪ್ರವಾಸ ಕಥನವನ್ನು ಇಲ್ಲಿ ಪ್ರಸ್ತುತಪಡಿಸುತ್ತೇನೆ.

### ಎಲ್ಲಿಂದ ಶುರು ಮಾಡೋಣ!

ದುಬೈ ಎಂದೊಡನೆ ಸಾಮಾನ್ಯವಾಗಿ ನೆನಪಾಗುವ ಗಗನಚುಂಬಿ ಕಟ್ಟಡಗಳು, ಐಶಾರಾಮೀ ಕಾರುಗಳು ಪಂಚತಾರಾ ಹೋಟೇಲು ಮತ್ತು ಮಾಲ್ ಗಳ ಬಗ್ಗೆ ಓದುಗರು ಸಾಮಾನ್ಯ ಜ್ಞಾನ ಹೊಂದಿರುತ್ತಾರೆ ಅದರ ಬಗ್ಗೆ ಹೆಚ್ಚು ಬರೆಯದೇ ನಾನು ಪ್ರವಾಸದ ಅವಧಿಯಲ್ಲಿ ಅಲ್ಲಿನ ಜನಜೀವನ, ಕಾನೂನು ಪಾಲನೆ ಮತ್ತು ಸುವ್ಯವಸ್ಥೆಯ ಬಗ್ಗೆ ಗ್ರಹಿಸಿದ ಕೆಲವು ವಿಚಾರಗಳನ್ನು ಮಾತ್ರ ಹಂಚಿಕೊಳ್ಳಬಯಸುತ್ತೇನೆ

1971 ರಲ್ಲಿ ಬ್ರಿಟನ್ ಪರ್ಷಿಯನ್ ಕೊಲ್ಲಿಯನ್ನು ತೊರೆದಾಗ, ದುಬೈ, ಅಬುಧಾಬಿ ಮತ್ತು ಐದು ಇತರೆ ಎಮಿರೇಟ್‌ಗಳ ಜೊತೆಗೆ ಸೇರಿ, ಯುನೈಟೆಡ್ ಅರಬ್ ಎಮಿರೇಟ್ಸ್ ರಾಷ್ಟ್ರವನ್ನು ರಚಿಸಿಕೊಂಡಿತು. 1973 ರಲ್ಲಿ, ದುಬೈ ಇತರೆ ಎಮಿರೇಟ್‌ಗಳ ಜೊತೆ ಸೇರಿ ಏಕರೂಪದ ನಗದು 'ಯುಎಇ ಧಿರಂ' ಅಳವಡಿಸಿಕೊಂಡಿದೆ.

ಆರ್ಥಿಕ ಅಭಿವೃದ್ಧಿ 1970ರ ನಂತರದ ದಶಕಗಳಲ್ಲಿ ದುಬೈ ತೈಲ ಮತ್ತು ವ್ಯಾಪಾರದ ಆದಾಯದ ಹೆಚ್ಚಳದಿಂದ ಶೀಘ್ರ ಅಭಿವೃದ್ಧಿಯನ್ನು ಕಂಡಿತು 1979ರಲ್ಲಿ ಜೆಬೆಲ್ ಅಲಿ ಹೆಸರಿನ ವಿಶ್ವದಲ್ಲಿ ಮಾನವ ನಿರ್ಮಿತ ಅತಿ ದೊಡ್ಡ ಬಂದರನ್ನು ನಿರ್ಮಿಸಲಾಯಿತು. ವಿದೇಶಿ ಕಂಪೆನಿಗಳಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಲ್ಲಿ ವಿದೇಶಗಳ ನುರಿತ ಕೆಲಸಗಾರರನ್ನು ಕರೆತರುವುದಕ್ಕೆ ಹಾಗೂ ರಫ್ತು ಬಂಡವಾಳವನ್ನು ಆಕರ್ಷಿಸಲು ಅನುಕೂಲವಾಗುವಂತೆ ಜೆಬೆಲ್ ಅಲಿ ಮುಕ್ತ ವ್ಯವಹಾರ ವಲಯವನ್ನು ಅಭಿವೃದ್ಧಿ ಪಡಿಸಲಾಯಿತು. ಯುಎಇ ಉತ್ಕರ್ಷೆಯಲ್ಲಿ ಭಾರತೀಯರ ಪಾಲು ಮಹತ್ವದದ್ದು ಎಂಬುದು ಉಲ್ಲೇಖಾರ್ಹ. ಇದೀಗ ನೀವು ದುಬೈ ನಗರಕ್ಕೆ ಭೇಟಿ ಇತ್ತರೆ ಬಹು ಸಂಖ್ಯೆಯ ಭಾರತೀಯರನ್ನು (ಒಟ್ಟು ಜನಸಂಖ್ಯೆಯ ಶೇ 30.) ಕಾಣಬಹುದು.

### ಕಠಿಣ ಶ್ರಮವೇ ಯಶಸ್ಸಿನ ಹೆದ್ದಾರಿ

ನಾನು ಭೇಟಿಯಾದ ಹಲವು ಪರಿಚಯಸ್ತರು, ಅನಿವಾಸಿ ಭಾರತೀಯರು ಮತ್ತು ಏಷ್ಯನ್ನರು ಹೇಳುವುದು ಒಂದೇ- ಇಲ್ಲಿ ಯಶಸ್ಸಿಗೆ ಕಠಿಣ ಪರಿಶ್ರಮವೇ ರಹದಾರಿ. ಇಲ್ಲಿ ಉದ್ಯೋಗ ಮಾಡುತ್ತಿರುವ ಎಲ್ಲ ವಲಸಿಗರೂ ತಮ್ಮ ತಮ್ಮ ಕೆಲಸಗಳಲ್ಲಿ ಕಠಿಣ ಪರಿಶ್ರಮ ವಹಿಸುತ್ತಾರೆ. ಅದು ಪಂಚತಾರಾ ಹೋಟೇಲುಗಳಲ್ಲಿರಬಹುದು ಅಥವಾ ಚಾಕಲೇಟ್ ಮಾರುವ ಚಿಕ್ಕ ಅಂಗಡಿಯಿರಬಹದು ಎಲ್ಲೆಲ್ಲೂ ಜನರ ದಕ್ಷತೆ ಮತ್ತು ತೊಡಗಿಸಿಕೊಳ್ಳುವಿಕೆ ಎದ್ದು ಕಾಣುತ್ತದೆ. ಇಲ್ಲಿ ಕೇವಲ ಪ್ರವಾಸಿಗರು ಮಾತ್ರ ಮೋಜು ಮಸ್ತಿಯಲ್ಲಿ ತೊಡಗುತ್ತಾರೆ ಹೊರತು ಇಲ್ಲಿ ಉದ್ಯೋಗ/ವ್ಯಾಪಾರ ನಡೆಸುವ ಜನರು ಪ್ರವಾಸಿ ಆಕರ್ಷಣೆಯ ಮಾಲ್, ಪಾರ್ಕ್‌ಗಳಲ್ಲಿ ಕಾಣಸಿಗುವುದು ಅಪರೂಪ ಎಂದೇ ಹೇಳಬಹುದು.

### ಕಾನೂನು ಪರಿಪಾಲನೆ

ದುಬೈಯಂಥ ಮರಳುಗಾಡಿನಲ್ಲಿರುವ ಅದೂ ಪೆಟ್ರೋಲ್ ಇತ್ಯಾದಿ ತೈಲ ನಿಕ್ಷೇಪಗಳು ಅತೀ ಕಡಿಮೆ ಪ್ರಮಾಣದಲ್ಲಿದ್ದರೂ ದುಬೈ ಇಡೀ ಅರೇಬಿಯಾ ಭೂಖಂಡದ ಮುಕುಟಮಣಿಯಾಗಿರುವುದು ಅಲ್ಲಿನ ಕಟ್ಟುನಿಟ್ಟಾದ ಕಾನೂನು ವ್ಯವಸ್ಥೆಯಿಂದಾಗಿ *United Arab Emirates (UAE)*; ಯುನೈಟೆಡ್ ಆ್ಯರಬ್ ಎಮಿರೇಟ್ಸ್ ಒಕ್ಕೂಟದ ದೇಶವಾದ ಅಭುದಾಬಿ ಸುರಕ್ಷಾ ಸೂಚ್ಯಂಕದಲ್ಲಿ ಜಗತ್ತಿನಲ್ಲಿ ಮೊದಲಸ್ಥಾನದಲ್ಲಿದ್ದು (86.46) ದುಬೈ ಆರನೇ ಸ್ಥಾನದಲ್ಲಿದೆ (80.48). ಅಲ್ಲಿ ಸಾಮಾನ್ಯವಾಗಿ ಯಾರೂ ಕಾರುಗಳನ್ನು ಲೈಸನ್ಸ್ ಇಲ್ಲದೇ ಚಲಾಯಿಸಲಾರರು ಮತ್ತು ಎಲ್ಲೆಂದಲ್ಲಿ ವಾಹನ ಪಾರ್ಕಿಂಗ್ ಅಸಾಧ್ಯವೇ ಸರಿ! ಎಷ್ಟೇ ದೊಡ್ಡ ಐಶಾರಾಮಿ ಕಾರು ಕೂಡ ಪಾದಚಾರಿಗಳು ದಾಟುವವರೆಗೆ ಸಹನೆಯಿಂದ ಅನುವು ಮಾಡಿಕೊಟ್ಟು ನಂತರ ಮುಂದುವರಿಯುತ್ತದೆ. ಅದೇ ರೀತಿ ಪಾದಚಾರಿಗಳು ಮುಖ್ಯ ರಸ್ತೆಗಳ ಫುಟ್ ಪಾತ್ ಹೊರತುಪಡಿಸಿ ಗೊತ್ತುಗುರಿಯಿಲ್ಲದೇ ರಸ್ತೆಯಲ್ಲಿ ನಡೆಯುವಂತಿಲ್ಲ, ಕೊಲ್ಲಿ ದೇಶಕ್ಕೆ ಬರುವ ಪ್ರವಾಸಿಗರು ಯಾ ಕಾರ್ಮಿಕರು ಇಲ್ಲಿನ ನೆಲದ ಕಾನೂನಿಗೆ ಗೌರವ ನೀಡಲು ಅನಿವಾರ್ಯವಾಗಿ ಕಲಿಯಲೇಬೇಕು ಇಲ್ಲವೇ ದಂಡ ಭರಿಸಲು/ಜೈಲು ಸೇರಲು ತಯಾರಿರಬೇಕು !

(ಮುಂದುವರಿಯುವುದು)

ಸೆಲ್ಕೋ ಇಂಡಿಯಾ ಮತ್ತು ಜೀವಿಕಾ ಎಂದೇ ಪ್ರಸಿದ್ಧವಾಗಿರುವ ಬಿಹಾರದ ಬಿಆರ್‌ಎಲ್‌ಪಿಎಸ್ ನ (ಎಸ್‌ಆರ್‌ಎಲ್‌ಎಂ) ನಡುವೆ ಬಿಹಾರದ ಮುಝಾಫರಪೂರ್ ಮತ್ತು ಬೇಗುಸರಾಯ್ ಜಿಲ್ಲೆಗಳಲ್ಲಿ ಮಹಿಳಾ ಸಬಲೀಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಕೇಂದ್ರೀಕೃತ ನವೀಕರಿಸಬಹುದಾದ ಇಂಧನ ಪರಿಸರವನ್ನು ಅಭಿವೃದ್ಧಿಪಡಿಸುವ ಕುರಿತು ಒಪ್ಪಂದಕ್ಕೆ ಸಹಿಹಾಕಲಾಯಿತು.

ಈ ಸಂದರ್ಭದಲ್ಲಿ, ಸೆಲ್ಕೋ ಇಂಡಿಯಾದ ಉಪ ಮಹಾಪ್ರಬಂಧಕ ಪ್ರಸನ್ನ ಹೆಗಡೆ, ಅಮೋಘ್ ಮಮದಾಪೂರ್, ವಿನಾಯಕ ಹೆಗಡೆ ಜೀವಿಕಾ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.




ಸೆಲ್ಕೋ ಫೌಂಢೇಷನ್‌ನಲ್ಲಿ ಜನವರಿ 18 ರಂದು ನಡೆದ 50ನೆಯ ರೀ-ಮಂಥನ ಕಾರ್ಯಕ್ರಮದಲ್ಲಿ ಅಕ್ಷಯಕಲ್ಪ ಆರ್ಗ್ಯಾನಿಕ್ ನ ಸಹ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಕುಮಾರ್ ಅವರು ಅಕ್ಷಯಕಲ್ಪದ ಕಾರ್ಯವೈಖರಿ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ ಅವರನ್ನು ಸೆಲ್ಕೋ ಸಂಸ್ಥೆಯಿಂದ ಸನ್ಮಾನಿಸಿ ಗೌರವಿಸಲಾಯಿತು.




ಬೆಂಗಳೂರಿನ ನಬಾರ್ಡ್ ಮತ್ತು ಕಿಸಾನ್ ಭಾರತಿ ಸಂಸ್ಥೆಯ ಸಹೋಗದಲ್ಲಿ ರಾಯಚೂರು ಜಿಲ್ಲೆ ಸಿಂಧನೂರಿನ ಸ್ವಾಸ್ಥ್ಯ ರೈತ ಉತ್ಪಾದಕ ಸಂಸ್ಥೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಸಮಾವೇಶ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ನಬಾರ್ಡ್‌ನ ಜಿಲ್ಲಾ ಅಭಿವೃದ್ದಿ ಅಧಿಕಾರಿ ಕವಿತಾ ಉದ್ಘಾಟಿಸಿದರು. ಕಿಸಾನ್ ಭಾರತಿ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ವಿ. ಪಾಟೀಲ್, ಕೆಜಿಬಿಯ ಸಿಂಧನೂರು ಶಾಖೆಯ ಮುಖ್ಯ ವ್ಯವಸ್ಥಾಪಕ ಪ್ರತಾಪ್, ವೆಂಕಟೇಶ್, ಆರ್‌ಡಿಸಿಸಿ ಬ್ಯಾಂಕ್‌ನ ವ್ಯವಸ್ಥಾಪಕ ಶರಣಪ್ಪ ಹಾಗೂ ಸ್ಥಳೀಯ 10 ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.






ಕೊಪ್ಪಳದ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ನಡೆದ 21 ಜೋಡಿ ವಿಶೇಷಚೇತನರ ಸಾಮೂಹಿಕ ವಿವಾಹ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು ಕಾರ್ಯಕ್ರಮದಲ್ಲಿ ಮದುವೆಯಾದ ನವ ಜೋಡಿಗಳಿಗೆ ತಮ್ಮ ಮುಂದಿನ ಜೀವನ ನಿರ್ವಹಣೆಗಾಗಿ ಸೆಲ್ಕೋ ಸಂಸ್ಥೆಯ ಮೂಲಕ ನೇಸರನ ಆಸರೆ ಎಂಬ ಶೀರ್ಷಿಕೆಯಡಿ ಒಂದು ಗೂಡು ಅಂಗಡಿಯನ್ನು ನೀಡಲಾಗುತ್ತಿದೆ.

ಈ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ಪ್ರಶಸ್ತಿ ವಿಜೇತ ಘನಶ್ಯಾಮ್ ಭಾಂಡೆ ಅವರಿಗೆ ಅಭಿನವ ಗವಿಸಿದ್ದೇಶ್ವರ ಮಹಾ ಶಿವಯೋಗಿಗಳು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸೆಲ್ಕೋ ಇಂಡಿಯಾದ ಕ್ಷೇತ್ರ ವ್ಯವಸ್ಥಾಪಕ ಮಂಜುನಾಥ ಭಾಗವತ್, ಸೆಲ್ಕೋ ಫೌಂಡೇಶನ್ ನ ಪ್ರಕಾಶ್ ಮೇಟಿ, ರಾಜೇಂದ್ರ ಗೀತೆ, ತಿಪ್ಪೇಶ್ ಹಾಗೂ ಶಾಖೆಯ ಸಿಬಂದಿ ವರ್ಗದವರು ಭಾಗವಹಿಸಿದ್ದರು.





ಉಡುಪಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೆಲ್ಕೋ ಸಂಸ್ಥೆಯ ವತಿಯಿಂದ ಆಗಿರುವ ಕೆಲಸಗಳನ್ನು ಗುರುತಿಸಿ ರಾಜ್ಯ ಸರ್ಕಾರದ ವತಿಯಿಂದ ಅಭಿನಂದನಾ ಪತ್ರ ನೀಡಲಾಯಿತು. ಕರ್ನಾಟಕ ಸರ್ಕಾರದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಪ್ರಶಂಸಾ ಪತ್ರವನ್ನು ಸೆಲ್ಕೋ ಇಂಡಿಯಾದ ಉಪ ಮಹಾಪ್ರಬಂಧಕ ಗುರುಪ್ರಕಾಶ್ ಶೆಟ್ಟಿ ಅವರಿಗೆ ಉಡುಪಿಯಲ್ಲಿ ಇತ್ತೀಚೆಗೆ ನೀಡಿದರು.

ಈ ಸಂದರ್ಭದಲ್ಲಿ, ಶಾಸಕರುಗಳಾದ ಕುಂದಾಪುರದ ಕಿರಣ್ ಕೊಡ್ಗಿ, ಬೈಂದೂರಿನ ಗುರುರಾಜ್ ಗಂಟಿಹೊಳೆ, ಉಡುಪಿಯ ಯಶಪಾಲ್ ಸುವರ್ಣ, ಜಿಲ್ಲಾಧಿಕಾರಿ ವಿದ್ಯಾಕುಮಾರಿ, ಆರೋಗ್ಯ ಆಯುಕ್ತ ರಣದೀಪ್ ಐಎಎಸ್., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಾದಲ್, ಜಿಲ್ಲಾ ಆರೋಗ್ಯಾಧಿಕಾರಿ ಗಡಾದ್ ಹಾಜರಿದ್ದರು.

SELCO®

# WORLD NGO DAY

**Empowering Communities Every Day! Join SELCO on World NGO Day,to Light Up Lives Together.**

**February 27, 2024**



www.selco-india.com

Helpline
1800-419-0780